# ಪಕ್ಷದ ಸಂವಿಧಾನ

**ಸಿಪಿಐ (ಮಾವೋವಾದಿ)**

# ಪಕ್ಷದ ಸಂವಿಧಾನ

## ಅಧ್ಯಾಯ 1 : ಸಾಮಾನ್ಯ ಕಾರ್ಯಕ್ರಮ

ಭಾರತ ಕಮ್ಯುನಿಸ್ಟ್ ಪಕ್ಷ (ಮಾವೊವಾದಿ) ಇದು ಭಾರತದ ಕಾರ್ಮಿಕ ವರ್ಗದ ಸದೃಢೀಕೃತ ರಾಜಕೀಯ ಮುಂಚೂಣಿಯಾಗಿದೆ. ಮಾರ್ಕ್ಸ್‌ವಾದ-ಲೆನಿನ್‌ವಾದ-ಮಾವೊವಾದವು ಈ ಪಕ್ಷದ ಚಟುವಟಿಕೆಗಳ ಎಲ್ಲಾ ಕ್ಷೇತ್ರ (sphere) ಗಳಲ್ಲೂ ಅದರ ಚಿಂತನೆಗಳಿಗೆ ಮಾರ್ಗದರ್ಶನ ನೀಡುವ ಸೈದ್ಧಾಂತಿಕ ತಳಹದಿಯಾಗಿದೆ. ಪ್ರಪಂಚ ಕಾರ್ಮಿಕ ವರ್ಗದ ಕ್ರಾಂತಿಯ ಭಾಗವಾಗಿ ಭಾರತದಲ್ಲಿ ನವ ಪ್ರಜಾತಂತ್ರ ಕ್ರಾಂತಿಯನ್ನು ಮುಂದುವರಿಸಿ ಪೂರ್ತಿಗೊಳಿಸುವುದು ಕಮ್ಯುನಿಸ್ಟ್ ಪಕ್ಷದ ತಕ್ಷಣದ ಗುರಿ ಅಥವಾ ಕಾರ್ಯಕ್ರಮವಾಗಿದೆ.

ಪರೋಕ್ಷ ಆಳ್ವಿಕೆ –ಶೋಷಣೆ –ನಿಯಂತ್ರಣಗಳ ರೂಪದಲ್ಲಿರುವ (ಅವುಗಳನ್ನು ಒಳಗೊಂಡಿರುವ) ನವ ವಸಾಹತುಶಾಹಿಯ ಅಡಿಯಲ್ಲಿನ ಅರೆ-ವಸಾಹತು, ಅರೆ-ಊಳಿಗಮಾನ್ಯ ವ್ಯವಸ್ಥೆಯನ್ನೂ, ಭಾರತದ ಕ್ರಾಂತಿಯ ಮೂರು ಟಾರ್ಗೆಟ್‌ಗಳಾದ ಸಾಮ್ರಾಜ್ಯವಾದ, ಊಳಿಗಮಾನ್ಯತೆ ಮತ್ತು ದಲ್ಲಾಳಿ *ಅಧಿಕಾರಶಾಹಿ* ದೊಡ್ಡ ಬಂಡವಾಳಶಾಹಿಗಳನ್ನೂ ಕಿತ್ತೊಗೆಯುವ ಮೂಲಕ ಇದನ್ನು ಸಾಧಿಸಬೇಕಾಗಿದೆ. ಪಕ್ಷದ ಅಂತಿಮ ಗುರಿ ಅಥವಾ ಗರಿಷ್ಠ ಕಾರ್ಯಕ್ರಮ ಕಮ್ಯುನಿಸ್ಟ್ ಸಮಾಜವನ್ನು ಸ್ಥಾಪಿಸುವುದಾಗಿದೆ. ನವ ಪ್ರಜಾತಂತ್ರ ಕ್ರಾಂತಿಯನ್ನು ಸಶಸ್ತ್ರ ವ್ಯವಸಾಯ ಕ್ರಾಂತಿಕಾರಿ ಯುದ್ಧದ ಮೂಲಕ, ಅಂದರೆ, ಪ್ರದೇಶವಾರು ಅಧಿಕಾರ ಕಸಿಯುವುದನ್ನು ಕೇಂದ್ರ ಕರ್ತವ್ಯವಾಗಿ ಹೊಂದಿರುವ ಸುದೀರ್ಘ ಪ್ರಜಾಸಮರದ ಮೂಲಕ ಸಾಧಿಸಲಾಗುತ್ತದೆ. ಗ್ರಾಮೀಣ ಭಾಗದಿಂದ ಆರಂಭಿಸಿ ನಗರಗಳನ್ನು ಸುತ್ತುವರಿದು ಆ ಮೂಲಕ ಅಂತಿಮವಾಗಿ ಅವುಗಳನ್ನು ವಶಪಡಿಸಿಕೊಳ್ಳುವ ಮೂಲಕ ಸುದೀರ್ಘ ಪ್ರಜಾಸಮರವನ್ನು ಯಶಸ್ವಿಗೊಳಿಸಲಾಗುತ್ತದೆ. ಹಾಗಾಗಿ ಆರಂಭದಿಂದಲೇ ಗ್ರಾಮೀಣ ಪ್ರದೇಶ ಹಾಗೂ ಸುದೀರ್ಘ ಪ್ರಜಾಸಮರ ಪಕ್ಷದ ಕೆಲಸದ ಗುರುತ್ವ ಕೇಂದ್ರವಾಗಿರುತ್ತದೆ. ಈ ಕ್ರಾಂತಿಯ ಸಂಪೂರ್ಣ ಪ್ರಕ್ರಿಯೆಯಲ್ಲಿ ಪಕ್ಷ, ಸೈನ್ಯ ಮತ್ತು ಐಕ್ಯರಂಗಗಳು ಮೂರು ಮಾಂತ್ರಿಕ ಆಯುಧಗಳ ಪಾತ್ರ ವಹಿಸುತ್ತವೆ. ಇವುಗಳ ನಡುವಿನ ಪರಸ್ಪರ ಸಂಬಂಧಗಳಲ್ಲಿ ಪಕ್ಷವು ಮೂಲಭೂತ ಪಾತ್ರ ನಿರ್ವಹಿಸುತ್ತದೆ, ಅದೇ ವೇಳೆ ಸೈನ್ಯ ಮತ್ತು ಐಕ್ಯರಂಗ ಇವು ಪಕ್ಷದ ಕೈಯಲ್ಲಿರುವ ಎರಡು ಪ್ರಮುಖ ಶಸ್ತ್ರಗಳಾಗಿರುತ್ತವೆ. ಈ ಕ್ರಾಂತಿಯಲ್ಲಿ ಸಶಸ್ತ್ರ ಹೋರಾಟವು ಮುಖ್ಯ ಹೋರಾಟ ರೂಪವೂ, ಸೈನ್ಯವು ಮುಖ್ಯ ರೂಪದ ಸಂಘಟನೆಯೂ ಆಗಿರುವುದರಿಂದ ಸಶಸ್ತ್ರ ಹೋರಾಟವು ನಿರ್ಣಾಯಕ ಪಾತ್ರ ನಿರ್ವಹಿಸುತ್ತದೆ. ಅದೇ ವೇಳೆ ಸಶಸ್ತ್ರ ಹೋರಾಟವನ್ನು ಮುನ್ನಾಗಿಸುವ ಪ್ರಕ್ರಿಯೆಯಲ್ಲಿ ಹಾಗೂ ಸಶಸ್ತ್ರ ಹೋರಾಟಕ್ಕಾಗಿಯೇ ಐಕ್ಯರಂಗವನ್ನು ಕಟ್ಟಲಾಗುತ್ತದೆ. ಸಮೂಹ ಸಂಘಟನೆಗಳು ಮತ್ತು ಸಮೂಹ ಹೋರಾಟಗಳು ಅಗತ್ಯ ಮತ್ತು ಅನಿವಾರ್ಯ; ಆದರೆ ಅವುಗಳ ಉದ್ದೇಶ ಯುದ್ಧಕ್ಕೆ ಸೇವೆ ಸಲ್ಲಿಸುವುದಾಗಿರುತ್ತದೆ. ಗೆರಿಲ್ಲಾ ವಲಯಗಳನ್ನೂ ಗೆರಿಲ್ಲಾ ಸ್ಥಾವರಗಳನ್ನೂ ಬೆಳೆಸಿ ಅವುಗಳನ್ನು ಪರಿವರ್ತಿಸುವ (transforming) ಮೂಲಕ ಪೂರ್ಣ ಪ್ರಮಾಣದ ಪ್ರಜಾ ವಿಮೋಚನಾ ಸೇನೆಯನ್ನು ಹಾಗೂ ಸ್ಥಾವರ ಪ್ರದೇಶಗಳನ್ನು ಸ್ಥಾಪಿಸುವುದು ನಮ್ಮ ಪಕ್ಷದ ತಕ್ಷಣದ ಮತ್ತು ಅತ್ಯಂತ ತುರ್ತಿನ ಕರ್ತವ್ಯವಾಗಿದೆ.

ನವ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಪೂರ್ಣಗೊಳಿಸಿದ ಬೆನ್ನಿಗೇ ಪಕ್ಷವು ಸಮಾಜವಾದ ಸ್ಥಾಪಿಸುವ ದಿಕ್ಕಿನಲ್ಲಿ ಯಾವುದೇ ವಿಳಂಬ ಅಥವಾ ತಡೆಯಿಲ್ಲದೇ ಮುಂದುವರಿಯುತ್ತದೆ. ಏಕೆಂದರೆ ಪ್ರಜಾಸತ್ತಾತ್ಮಕ ಕ್ರಾಂತಿಯು ಸಮಾಜವಾದಕ್ಕೆ ತಳಹದಿಯನ್ನು ಆಗಲೇ ಹಾಕಿರುತ್ತಾದ್ದರಿಂದ ಅದಕ್ಕಾಗಿ ಕಾಯುವ ಅಗತ್ಯ ಇರುವುದಿಲ್ಲ. ಅದರ ತರುವಾಯ ಪಕ್ಷವು ಕಾರ್ಮಿಕ ವರ್ಗದ ಸರ್ವಾಧಿಕಾರದಡಿಯಲ್ಲಿ ಕ್ರಾಂತಿಯನ್ನು ಮುಂದುವರಿಸುವ ಮೂಲಕ ಸಮತಾವಾದದ (ಕಮ್ಯೂನಿಸಂ) ಸಾಕಾರಕ್ಕಾಗಿ ತನ್ನ ಪಯಣವನ್ನು ಮುಂದುವರಿಸುತ್ತದೆ.

ಸಮಾಜವಾದಿ ಸಮಾಜವು ಚಾರಿತ್ರಿಕ ಕಾಲಘಟ್ಟದ ಸಾಕಷ್ಟು ದೀರ್ಘ ಕಾಲವನ್ನು ಆವರಿಸಿರುತ್ತದೆ. ಈ ಚಾರಿತ್ರಿಕ ಕಾಲಘಟ್ಟದುದ್ದಕ್ಕೂ ವರ್ಗಗಳು, ವರ್ಗವೈರುಧ್ಯಗಳು ಮತ್ತು ವರ್ಗಸಂಘರ್ಷ ಇರುತ್ತವೆ. ಸಮಾಜವಾದಿ ಹಾದಿ ಮತ್ತು ಬಂಡವಾಳಶಾಹಿ ಹಾದಿಗಳ ನಡುವಿನ ಸಂಘರ್ಷ ಕೂಡ ಉಳಿದೇ ಇರುತ್ತದೆ. ಕಾರ್ಮಿಕ ವರ್ಗದ ಸರ್ವಾಧಿಕಾರದಡಿಯಲ್ಲಿ ಕ್ರಾಂತಿಯನ್ನು ಮುಂದುವರಿಸುವ ಸಿದ್ಧಾಂತವನ್ನು ಅವಲಂಬಿಸುವುದು ಹಾಗೂ ಅದನ್ನು ಜಾರಿಗೊಳಿಸುವುದರಿಂದ ಮಾತ್ರವೇ ಈ ಎಲ್ಲಾ ಸಮಸ್ಯೆಗಳನ್ನೂ ಸರಿಯಾಗಿ ಪರಿಹರಿಸಲು ಸಾಧ್ಯ. ಕಾಮ್ರೆಡ್ ಮಾವೊ ಸೆತುಂಗ್ ಆರಂಭಿಸಿ ನಾಯಕತ್ವ ನೀಡಿದ ಕಾರ್ಮಿಕ ವರ್ಗದ ಮಹಾನ್ ಸಾಂಸ್ಕೃತಿಕ ಕ್ರಾಂತಿಯು ಸಮಾಜವಾದಿ ಪರಿಸ್ಥಿತಿಗಳಡಿಯಲ್ಲಿ ಬಂಡವಾಳಶಾಹಿ ವರ್ಗದ ವಿರುದ್ಧ ಮತ್ತು ಎಲ್ಲಾ ಶೋಷಕ ವರ್ಗಗಳ ವಿರುದ್ಧ ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ಸದೃಢಗೊಳಿಸಲು ಮತ್ತು ಆ ಮೂಲಕ ಬಂಡವಾಳಶಾಹಿ ಪುನರ್‌ಸ್ಥಾಪನೆಯ ಅಪಾಯದ ವಿರುದ್ಧ ಹೋರಾಡಲು ನಡೆಸಿದ ಒಂದು ಮಹೋನ್ನತ ರಾಜಕೀಯ ಕ್ರಾಂತಿಯಾಗಿತ್ತು ಎಂಬುದನ್ನು ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ಪಕ್ಷವು ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಯನ್ನು ನಿರಂತರವಾಗಿ ಎತ್ತಿ ಹಿಡಿಯುತ್ತಾ ಅಂತರರಾಷ್ಟ್ರೀಯ ಮಟ್ಟದಲ್ಲಿ ನೈಜ ಮಾಲೆಮಾವಾದಿ ಶಕ್ತಿಗಳನ್ನು ಐಕ್ಯಗೊಳಿಸಲು ಇನ್ನೂ ದೃಢವಾಗಿ ಮತ್ತು ಪ್ರಭಾವಯುತವಾಗಿ ಕೊಡುಗೆ ನೀಡುವುದನ್ನು ಮುಂದುವರಿಸುತ್ತದೆ. ಪಕ್ಷ ಪರಿಷ್ಕರಣವಾದದ ಎಲ್ಲಾ ರೂಪಗಳ ವಿರುದ್ಧ ಕೂಡ ಹೋರಾಡುತ್ತದೆ. ಮಾಲೆಮಾವಾದಿ ಶಕ್ತಿಗಳನ್ನು ಐಕ್ಯಗೊಳಿಸುವ ಹೊತ್ತಿನಲ್ಲೇ ಪಕ್ಷವು ಇಡೀ ಪ್ರಪಂಚದ ದಮನಿತ ಜನಸಮೂಹಗಳೊಂದಿಗೆ ಮತ್ತು ದಮನಿತ ರಾಷ್ಟ್ರಗಳೊಂದಿಗೆ ಐಕ್ಯತೆ ಸಾಧಿಸುತ್ತದೆ ಹಾಗೂ ಅವರುಗಳೊಟ್ಟಿಗೆ ಸೇರಿಕೊಂಡು ಸಾಮ್ರಾಜ್ಯವಾದದ ವಿರುದ್ಧ ಮತ್ತು ಎಲ್ಲಾ ಪ್ರತಿಗಾಮಿತ್ವದ ವಿರುದ್ಧ ಕಾರ್ಮಿಕ ವರ್ಗದ ಪ್ರಪಂಚ ಕ್ರಾಂತಿಯನ್ನು ಪೂರ್ಣಗೊಳಿಸುವತ್ತ ತನ್ನ ಹೋರಾಟವನ್ನು ಮುಂದುವರಿಸುತ್ತದೆ, ಹಾಗೂ ಆ ಮೂಲಕ ಪ್ರಪಂಚಮಟ್ಟದಲ್ಲಿ ಕಮ್ಯೂನಿಸಂಅನ್ನು ಸಾಕಾರಗೊಳಿಸುವೆಡೆಗೆ ದಾರಿ ಮಾಡುತ್ತದೆ.

ಈ ಹಾದಿಯುದ್ದಕ್ಕೂ ಪಕ್ಷದಾದ್ಯಂತ ಸಂಗಾತಿಗಳು ಪ್ರವಾಹಕ್ಕೆದುರಾಗಿ ಈಜಲು ಧೈರ್ಯ ತೋರುವಂತಹ ಕ್ರಾಂತಿಕಾರಿ ಸ್ಫೂರ್ತಿಯನ್ನು ತಮ್ಮದಾಗಿಸಿಕೊಳ್ಳುವ ಹಂಬಲ ಹೊಂದಿರಬೇಕು, ಪರಿಷ್ಕರಣವಾದವನ್ನಲ್ಲ –ಮಾರ್ಕ್ಸ್‌ವಾದವನ್ನು ಆಚರಿಸುವ ನೀತಿಗೆ, ಒಡಕಿಗಾಗಿಯಲ್ಲ– ಐಕ್ಯತೆಗಾಗಿ ಶ್ರಮಿಸುವ ನೀತಿಗೆ, ಕುತಂತ್ರಗಳಲ್ಲೂ ಪಿತೂರಿಗಳಲ್ಲೂ ತೊಡಗುವುದಲ್ಲ – ಮುಕ್ತವಾಗಿಯೂ ಪಾರದರ್ಶಕವಾಗಿಯೂ ಇರುವ ನೀತಿಗೆ – ಬದ್ಧವಾಗಿರಬೇಕು; ಜನತೆಯ ನಡುವಿನ ವೈರುಧ್ಯಗಳನ್ನೂ, ನಮಗೂ ಶತ್ರುವಿಗೂ ನಡುವಿರುವ ವೈರುಧ್ಯಗಳನ್ನೂ ಸರಿಯಾಗಿ ಬೇರ್ಪಡಿಸಿ ನೋಡುವುದರಲ್ಲಿ ಹಾಗೂ ಆ ಮೂಲಕ ಅವುಗಳನ್ನು ಸರಿಯಾಗಿ ಪರಿಹರಿಸುವುದರಲ್ಲಿ ನಿಷ್ಣಾತರಾಗಿರಬೇಕು; ಎಡ ಮತ್ತು ಬಲ ಅವಕಾಶವಾದಗಳ ವಿರುದ್ಧ ಮತ್ತು ಕಾರ್ಮಿಕ ವರ್ಗೇತರ ಪ್ರವೃತ್ತಿಗಳ ವಿರುದ್ಧ ಹೋರಾಡುತ್ತಾ, ಸಿದ್ಧಾಂತವನ್ನು ಆಚರಣೆಯೊಂದಿಗೆ ಬೆಸೆಯುವ, ಜನಸಮೂಹದೊಂದಿಗೆ ನಿಕಟ ಬಾಂಧವ್ಯ ಬೆಳೆಸಿಕೊಳ್ಳುವ ಹಾಗೂ ವಿಮರ್ಶೆ – ಆತ್ಮವಿಮರ್ಶೆ ಆಚರಿಸುವ ಶೈಲಿಯನ್ನು ಬೆಳೆಸಿಕೊಳ್ಳಬೇಕು. ನಮ್ಮ ಹಾದಿ ಕಲ್ಲುಮುಳ್ಳುಗಳಿಂದ ಕೂಡಿದ್ದರೂ ಭವಿಷ್ಯ ಉಜ್ವಲವಾಗಿದೆ. ನಮ್ಮ ಪಕ್ಷದ ಎಲ್ಲಾ ಸದಸ್ಯರೂ ತುಂಬು ಮನಸ್ಸಿನಿಂದ ತಮ್ಮ ಬದುಕನ್ನು ವಿಶ್ವಮಟ್ಟದಲ್ಲಿ ಕಮ್ಯೂನಿಸ್ಟ್ ಕ್ರಾಂತಿಗಾಗಿ ನಡೆಯುತ್ತಿರುವ ಮಹೋನ್ನತ ಹೋರಾಟಕ್ಕಾಗಿ ಸಮರ್ಪಿಸಬೇಕು; ಅವರು ಈ ವಿಚಾರದಲ್ಲಿ ದೃಢಚಿತ್ತ ಹೊಂದಿರಬೇಕು, ಯಾವುದೇ ರೀತಿಯ ತ್ಯಾಗಕ್ಕೆ ಹೆದರದೆ, ಎಲ್ಲಾ ರೀತಿಯ ಕಷ್ಟನಷ್ಟಗಳನ್ನೂ ಎದುರಿಸಿ ವಿಜಯ ಸಾಧಿಸಬೇಕು.

## ಅಧ್ಯಾಯ -2: ಪಕ್ಷ, ಬಾವುಟ, ಧ್ಯೇಯೋದ್ದೇಶಗಳು

**ಕಲಂ 1 : ಪಕ್ಷದ ಹೆಸರು :** ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೊವಾದಿ)

**ಕಲಂ 2 :** **ಬಾವುಟ :** ಪಕ್ಷದ ಬಾವುಟವು ಕೆಂಪು ಬಣ್ಣದ್ದಾಗಿದ್ದು, ಬಾವುಟದ ಮಧ್ಯೆ ಬಿಳಿಬಣ್ಣದಲ್ಲಿ ಕುಡುಗೋಲು-ಸುತ್ತಿಗೆ ಚಿಹ್ನೆಯನ್ನು ಮುದ್ರಿಸಿರುತ್ತದೆ. ಚಿಹ್ನೆಯಲ್ಲಿನ ಸುತ್ತಿಗೆಯು ಬಾವುಟದ ಸ್ತಂಭದ ಕಡೆಗಿರುತ್ತದೆ. ಬಾವುಟದ ಉದ್ದ-ಅಗಲಗಳು 3:2ರ ಅನುಪಾತದಲ್ಲಿರುತ್ತವೆ.

**ಕಲಂ 3 :** ಅ) ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೊವಾದಿ) ಇದು ಭಾರತದ ಕಾರ್ಮಿಕ ವರ್ಗದ ಸದೃಢೀಕೃತ ಮುಂಚೂಣಿಯಾಗಿರುತ್ತದೆ. ಅದು ಮಾಲೆಮಾ ವಾದವನ್ನು ತನ್ನ ಮಾರ್ಗದರ್ಶಕ ಸಿದ್ಧಾಂತವಾಗಿ ಹೊಂದಿರುತ್ತದೆ.

ಆ) ನವ ಪ್ರಜಾತಂತ್ರ ಕ್ರಾಂತಿಯುದ್ದಕ್ಕೂ ಪಕ್ಷವು ಭೂಗತವಾಗಿರುತ್ತದೆ.

**ಕಲಂ 4 :** **ಗುರಿಗಳು ಮತ್ತು ಧ್ಯೇಯೋದ್ದೇಶಗಳು**

ಭಾರತದಲ್ಲಿ ಸಾಮ್ರಾಜ್ಯವಾದ, ಊಳಿಗಮಾನ್ಯತೆ ಮತ್ತು ದಲ್ಲಾಳಿ-ಅಧಿಕಾರಶಾಹಿ ಬಂಡವಾಳಶಾಹಿಯನ್ನು ಸುದೀರ್ಘ ಪ್ರಜಾ ಸಮರದ ಮೂಲಕ ಮಾತ್ರವೇ ಕಿತ್ತೊಗೆದು ನವ ಪ್ರಜಾತಂತ್ರ ಕ್ರಾಂತಿಯನ್ನು ಸಾಧಿಸುವುದು ಹಾಗೂ ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಜನತೆಯ ಪ್ರಜಾತಾಂತ್ರಿಕ ಸರ್ವಾಧಿಕಾರವನ್ನು ಸ್ಥಾಪಿಸುವುದು ಪಕ್ಷದ ತಕ್ಷಣದ ಗುರಿಯಾಗಿದೆ. ನಂತರ ಅದು ಸಮಾಜವಾದದ ಸ್ಥಾಪನೆಗಾಗಿ ಹೋರಾಡುತ್ತದೆ. ಕಾರ್ಮಿಕ ವರ್ಗದ ನೇತೃತ್ವದಲ್ಲಿ ಕ್ರಾಂತಿಯನ್ನು ಮುಂದುವರಿಸುವ ಮೂಲಕ ಕಮ್ಯೂನಿಸಂ ಅನ್ನು ಸ್ಥಾಪಿಸುವುದು ಹಾಗೂ ಆ ಮೂಲಕ ಮಾನವನಿಂದ ಮಾನವನ ಶೋಷಣೆಯ ವ್ಯವಸ್ಥೆಯನ್ನು ಜಗತ್ತಿನಿಂದಲೇ ತೊಡೆದುಹಾಕುವುದು ಪಕ್ಷದ ಅಂತಿಮ ಗುರಿಯಾಗಿದೆ.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೊವಾದಿ) ತನ್ನನ್ನು ಜನತೆಯ ಮತ್ತು ಕ್ರಾಂತಿಯ ಸೇವೆಗಾಗಿ ಸಮರ್ಪಿಸಿಕೊಳ್ಳುತ್ತದೆ, ಜನತೆಯ ಬಗ್ಗೆ ಉನ್ನತವಾದ ಪ್ರೀತಿ ಮತ್ತು ಗೌರವವನ್ನು ಹೊಂದಿರುತ್ತದೆ, ಜನತೆಯನ್ನು ಅವಲಂಬಿಸುತ್ತದೆ ಹಾಗೂ ಅವರಿಂದ ಕಲಿಯುವುದರಲ್ಲಿ ಪ್ರಾಮಾಣಿಕವಾಗಿರುತ್ತದೆ. ಪಕ್ಷವು ಎಲ್ಲಾ ಪ್ರತಿಗಾಮಿ ಸಂಚುಗಳ ಮತ್ತು ಪರಿಷ್ಕರಣವಾದಿ ತಂತ್ರಗಾರಿಕೆಗಳ ವಿರುದ್ಧ ಸದಾ ಎಚ್ಚರವಾಗಿರುತ್ತದೆ.

**ಕಲಂ 5 :** ಪಕ್ಷವು ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಯ ಪತಾಕೆಯನ್ನು ಇನ್ನು ಮುಂದೆಯೂ ಎತ್ತಿಹಿಡಿಯುತ್ತದೆ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾಲೆಮಾವಾದಿ ಶಕ್ತಿಗಳ ಐಕ್ಯತೆ ಸಾಧಿಸುವಲ್ಲಿ ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸುತ್ತದೆ.

## ಅಧ್ಯಾಯ - 3 : ಸದಸ್ಯತ್ವ

**ಕಲಂ 6 :** ಭಾರತ ನಿವಾಸಿಯಾದ, 16 ವರ್ಷ ಪ್ರಾಯದವರಾಗಿರುವ, ಹಾಗೂ ಕಾರ್ಮಿಕ ವರ್ಗ, ರೈತಾಪಿ, ಶ್ರಮಜೀವಿ ಜನಸಮೂಹ ಅಥವಾ ಪೆಟಿ ಬೂರ್ಶ್ವಾ ವರ್ಗಗಳಿಗೆ ಸೇರಿರುವ ಯಾರೇ ವ್ಯಕ್ತಿ ಅಥವಾ ಇನ್ಯಾರೇ ಕ್ರಾಂತಿಕಾರಿಗಳು ಈ ಕೆಳಕಂಡ ನಿಬಂಧನಗಳಿಗೆ ಒಳಪಟ್ಟು ಪಕ್ಷದ ಸದಸ್ಯರಾಗಬಹುದು: ಆತ/ಆಕೆ ಮಾಲೆಮಾ ವಾದವನ್ನು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಮಾರ್ಗದರ್ಶಕ ಸಿದ್ಧಾಂತವಾಗಿ ಒಪ್ಪಿಕೊಂಡಿರಬೇಕು, ಪಕ್ಷದ ಕಾರ್ಯಕ್ರಮ ಮತ್ತು ಸಂವಿಧಾನವನ್ನು ಒಪ್ಪಿಕೊಳ್ಳಬೇಕು, ಪಕ್ಷದ ಯಾವುದಾದರೊಂದು ಘಟಕದ ಅಡಿಯಲ್ಲಿ ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಮತ್ತು ಪಕ್ಷದ ಶಿಸ್ತು ಪಾಲಿಸಬೇಕು, ಆ ಹಾದಿಯಲ್ಲಿ ಎದುರಾಗುವ ಅಪಾಯಗಳನ್ನು ಎದುರಿಸಲು ಸಿದ್ಧರಿರಬೇಕು, ಹಾಗೂ ಪಕ್ಷ ಘಟಕ ನಿಗದಿಪಡಿಸುವ ಸದಸ್ಯತ್ವ ಶುಲ್ಕ ಮತ್ತು ಪಕ್ಷ ನಿಧಿಗಳನ್ನು ನಿಯತವಾಗಿ ಪಾವತಿಸಲು ಒಪ್ಪಬೇಕು. *ಪ್ರತಿವರ್ಷ ಪಕ್ಷದ ಸದಸ್ಯತ್ವವನ್ನು ನವೀಕರಿಸಬೇಕಿರುತ್ತದೆ.*

**ಕಲಂ 7 :** ಸಾಮಾನ್ಯವಾಗಿ ಪಕ್ಷ ಸದಸ್ಯರನ್ನು ಪ್ರಾಥಮಿಕ ಪಕ್ಷ ಘಟಕವೊಂದರ ಮೂಲಕ ಬಿಡಿ ವ್ಯಕ್ತಿಗಳ ರೂಪದಲ್ಲಿ ಪಕ್ಷಕ್ಕೆ ಸೇರಿಸಿಕೊಳ್ಳಲಾಗುತ್ತದೆ. ಪ್ರತಿಯೊಬ್ಬ ಸದಸ್ಯತ್ವ ಅಭ್ಯರ್ಥಿಯನ್ನೂ ಇಬ್ಬರು ಪಕ್ಷ ಸದಸ್ಯರು ಶಿಫಾರಸು ಮಾಡಬೇಕು; ಆತನ/ಆಕೆಯ ಬಗ್ಗೆ ಅವರಿಗೆ ಸಂಪೂರ್ಣ ತಿಳುವಳಿಕೆಯಿರಬೇಕು ಹಾಗೂ ಅವರು ಆ ಅಗತ್ಯ ಮಾಹಿತಿಗಳನ್ನು ಪಕ್ಷಕ್ಕೆ ನೀಡಬೇಕು. ಪ್ರತಿಯೊಬ್ಬ ಅಭ್ಯರ್ಥಿಯೂ ಸದಸ್ಯತ್ವವನ್ನು *ಬಯಸುವವರು ಔಪಚಾರಿಕವಾಗಿ ಆ ರೀತಿ ಮಾಡಬೇಕಿರುತ್ತದೆ.*

**ಕಲಂ 8 :** ಸಂಬಂಧಪಟ್ಟ ಪ್ರಾಥಮಿಕ ಘಟಕವು ಅಭ್ಯರ್ಥಿಯ ಬಗ್ಗೆ ರಹಸ್ಯವಾಗಿ ಪಕ್ಷದೊಳಗೆ ಹಾಗೂ ಜನಸಮೂಹದ ಮಧ್ಯೆ ತನಿಖೆ ಮಾಡಬೇಕು. ಅರ್ಜಿಯನ್ನು ಮುಖ್ಯವಾಗಿ ಪಕ್ಷ ಕೋಶ/ಘಟಕವು ಶಿಫಾರಸು ಮಾಡಿ, ನಂತರ ಅದರ ಮೇಲ್ಸಮಿತಿ ಅನುಮೋದಿಸಬೇಕು. ಅಭ್ಯರ್ಥಿಯನ್ನು ಅಭ್ಯರ್ಥಿ-ಸದಸ್ಯರಾಗಿ ಪಕ್ಷಕ್ಕೆ ಸೇರಿಸಿಕೊಳ್ಳಲಾಗುತ್ತದೆ. ಅಭ್ಯರ್ಥಿ-ಸದಸ್ಯತ್ವ ನೀಡಿದ ನಂತರ ಅಂಥವರನ್ನು, ಅವರು ಕಾರ್ಮಿಕ ವರ್ಗ ಅಥವಾ ಭೂರಹಿತ – ಬಡರೈತ ಅಥವಾ ಕೃಷಿ ಕಾರ್ಮಿಕರಾಗಿದ್ದಲ್ಲಿ ಕನಿಷ್ಠ ಆರು ತಿಂಗಳ ಕಾಲ ಪರಿಶೀಲನೆಯಲ್ಲಿಡಬೇಕು; ಈ ಕಾಲಾವಧಿಯು ಮಧ್ಯಮ ರೈತ, ಮಧ್ಯಮ ವರ್ಗ ಅಥವಾ ನಗರದ ಮಧ್ಯಮ ವರ್ಗದವರಿಗೆ ಒಂದು ವರ್ಷ ಹಾಗೂ ಇತರ ವರ್ಗಗಳಿಂದಲೂ ಬರುವವರಿಗೆ ಎರಡು ವರ್ಷ ಆಗಿರುತ್ತದೆ. ಏರಿಯಾ ಸಮಿತಿಯಿಂದ ಮೇಲ್ಪಟ್ಟ ಎಲ್ಲಾ ಪಕ್ಷ ಸಮಿತಿಗಳೂ ಇದೇ ವಿಧಾನಗಳನ್ನು ಅನುಸರಿಸಿ ಹೊಸ ಸದಸ್ಯತ್ವ ನೀಡುವ ಅಧಿಕಾರ ಹೊಂದಿರುತ್ತವೆ.

***ಕಲಂ 9 :*** *ಶೋಷಕ ವರ್ಗಗಳಿಂದ ಯಾರನ್ನೂ ಆತ /ಆಕೆ ತಮ್ಮ ಆಸ್ತಿಗಳನ್ನು ಪಕ್ಷಕ್ಕೆ ಒಪ್ಪಿಸಿ ಜನರೊಂದಿಗೆ ಆಳವಾಗಿ ಬೆರೆಯದೇ ಪಕ್ಷದೊಳಗೆ ಸೇರಿಸಿಕೊಳ್ಳಲಾಗುವುದಿಲ್ಲ.*

***ಕಲಂ 10 :*** *ಸಾಬೀತಾದ ದ್ರೋಹಿಗಳು, ಶತ್ರು ಏಜೆಂಟರು, ಕೆರೀರಿಸ್ಟರು, ದುರ್ಗುಣಗಳಿರುವ ವ್ಯಕ್ತಿಗಳು, ಅಧಃಪತನ ಹೊಂದಿದವರು ಮತ್ತಿತರ ಅನ್ಯ ವರ್ಗ ಶಕ್ತಿಗಳನ್ನು ಪಕ್ಷದೊಳಗೆ ಸೇರಿಸಿಕೊಳ್ಳಲಾಗುವುದಿಲ್ಲ.*

***ಕಲಂ 11 :*** *ಸಾಮಾನ್ಯವಾಗಿ ಪಕ್ಷ ಸದಸ್ಯರನ್ನು ಪಕ್ಷ ಘಟಕವೊಂದರ ಮಾರ್ಗದರ್ಶನದಡಿ ಪಕ್ಷ ಚಟುವಟಿಕೆಗಳಿಗಾಗಿ ಸಂಘಟಿಸಲಾಗಿರುವ ಸಕ್ರಿಯ ಕಾರ್ಯಕರ್ತ ತಂಡ (ಆಕ್ಟಿವಿಸ್ಟ್ ಗ್ರೂಪ್)ಗಳಿಂದ ಸೇರ್ಪಡೆ ಮಾಡಿಕೊಳ್ಳಲಾಗುತ್ತದೆ. ಅವರನ್ನು ಅಭ್ಯರ್ಥಿ-ಸದಸ್ಯರಾಗಿ ಸೇರ್ಪಡೆ ಮಾಡಿಕೊಳ್ಳುವ ಮೊದಲು ಪಕ್ಷ ಘಟಕದ ನಿರ್ಣಯಾನುಸಾರ ಯಾವುದಾದರೂ ಪಕ್ಷ ಚಟುವಟಿಕೆಗಳಲ್ಲಿ ಕನಿಷ್ಠಪಕ್ಷ ಆರು ತಿಂಗಳ ಕಾಲ ತೊಡಗಿಸಿಕೊಳ್ಳಬೇಕು.*

***ಕಲಂ 12 :*** *ಅಭ್ಯರ್ಥಿತನದ ಅವಧಿಯ ಕೊನೆಯಲ್ಲಿ ಸಂಬಂಧಪಟ್ಟ ಪಕ್ಷ ಘಟಕವು ಸಮೀಕ್ಷೆ ನಡೆಸಿ ಪೂರ್ಣ ಸದಸ್ಯತ್ವ ನೀಡಬಹುದು ಅಥವಾ ಕಾರಣಗಳನ್ನು ಮನದಟ್ಟು ಮಾಡಿಕೊಟ್ಟು ಆತನ/ಆಕೆಯ ಅಭ್ಯರ್ಥಿ-ಸದಸ್ಯತ್ವವನ್ನು ಮತ್ತೆ ಆರು ತಿಂಗಳಿಗೆ ವಿಸ್ತರಿಸಬಹುದು. ಈ ನಿರ್ಣಯವನ್ನು ಮೇಲ್ಸಮಿತಿಗೆ ವರದಿ ಮಾಡಬೇಕು. ಕೆಳ ಸಮಿತಿಯ ಈ ನಿರ್ಣಯವನ್ನು ಮೇಲ್ಸಮಿತಿಗಳು ಬದಲಿಸಬಹುದು ಅಥವಾ ಆಂಶಿಕವಾಗಿ ಮಾರ್ಪಡಿಸಬಹುದು(modify). ವಲಯ/ಜಿಲ್ಲಾ ಸಮಿತಿ ಹೊಸ ಸದಸ್ಯತ್ವವನ್ನು ಅನುಮೋದಿಸಬೇಕು. ವಿಶೇಷ ಪ್ರಾದೇಶಿಕ ಸಮಿತಿ(SAC)/ರಾಜ್ಯ ಸಮಿತಿ ಅಂತಿಮವಾಗಿ ಅನುಮೋದಿಸುತ್ತದೆ.*

**ಕಲಂ *13* :** ಪಕ್ಷ ಸದಸ್ಯತ್ವಕ್ಕೆ ಎಲ್ಲಾ ಅರ್ಹತೆಗಳಿದ್ದು ವಿದೇಶದಲ್ಲಿ ವಾಸಿಸುತ್ತಿರುವ ಭಾರತೀಯರಿಗೆ ಸದಸ್ಯತ್ವ ನೀಡಬಹುದು. ಹಾಗೆಯೇ, ಭಾರತದಲ್ಲಿ ಖಾಯಂ ಆಗಿ ನೆಲೆಸಿರುವ ವಿದೇಶೀಯರಿಗೂ ಪಕ್ಷ ಸದಸ್ಯತ್ವ ನೀಡಬಹುದು.

ಒಂದು ವೇಳೆ ಇತರ ಮಾಲೆವಾದಿ ಗುಂಪಿನ ಸದಸ್ಯರು ನಮ್ಮ ಪಕ್ಷಕ್ಕೆ ಸೇರಬಯಸಿದಲ್ಲಿ, ನಂತರದ ಮೇಲ್ಸಮಿತಿಯ ಅನುಮೋದನೆಯೊಂದಿಗೆ ಅವರನ್ನು ಸೇರಿಸಿಕೊಳ್ಳಬಹುದು. ಮೂಲ ಪಕ್ಷದಲ್ಲಿ ಅವರ ಸ್ಥಾಯಿ ಪ್ರಾಥಮಿಕ ಸದಸ್ಯರದಾಗಿದ್ದರೆ ಅವರನ್ನು ಜಿಲ್ಲಾ/ಸಬ್ ಝೋನಲ್ ಸಮಿತಿಯ ಅನುಮೋದನೆ ಪಡೆದು ಪೂರ್ಣ ಸದಸ್ಯರಾಗಿ ಸೇರಿಸಿಕೊಳ್ಳಬಹುದು. ಮೂಲ ಪಕ್ಷದಲ್ಲಿ ಅವರು ಎಸಿ ಸದಸ್ಯರಾಗಿದ್ದಲ್ಲಿ ಅವರನ್ನು ರಾಜ್ಯ/ರೀಜಿನಲ್ ಸಮಿತಿಯ ಅನುಮೋದನೆಯೊಂದಿಗೆ ಸೇರಿಸಿಕೊಳ್ಳಬಹುದು. ಅವರು ಮೂಲ ಪಕ್ಷದಲ್ಲಿ ಜಿಲ್ಲಾ/ರೀಜಿನಲ್ ಸಮಿತಿಯ ಅಥವಾ ಅದಕ್ಕಿಂತ ಮೇಲ್ಸಮಿತಿಯ ಸದಸ್ಯರಾಗಿದ್ದರೆ ಅವರ ಸದಸ್ಯತ್ವವನ್ನು ಕೇಂದ್ರ ಸಮಿತಿ ಅನುಮೋದಿಸುತ್ತದೆ.

ಒಂದು ಬೂರ್ಶ್ವಾ ಅಥವಾ ಪರಿಷ್ಕರಣವಾದಿ ಪಕ್ಷದ ಸದಸ್ಯರೊಬ್ಬರು ಅದನ್ನು ತೊರೆದು ನಮ್ಮ ಪಕ್ಷವನ್ನು ಸೇರಬಯಸಿದರೆ ಅವರ ಅರ್ಜಿಯನ್ನು ನಮ್ಮ ಪಕ್ಷದ ಇಬ್ಬರು ಸದಸ್ಯರು ಶಿಫಾರಸು ಮಾಡಬೇಕು, ಅವರ ಪೈಕಿ ಕನಿಷ್ಠ ಒಬ್ಬರು ಎರಡು ವರ್ಷಗಳಿಂದಲಾದರೂ ಪಕ್ಷದ ಸದಸ್ಯರಾಗಿರಬೇಕು. ಆಕೆಯ/ಆತನ ಅಭ್ಯರ್ಥಿ-ಸದಸ್ಯತ್ವವನ್ನು ನಂತರದ ಮೇಲ್ಸಮಿತಿ ಅಂಗೀಕರಿಸಬೇಕು. ಅಂತೆಯೇ ಬೂರ್ಶ್ವಾ ಅಥವಾ ಪರಿಷ್ಕರಣವಾದಿ ಪಕ್ಷದಲ್ಲಿ ಏರಿಯ ಸ್ಥಾಯಿಯ ಅಥವಾ ಅದಕ್ಕಿಂತ ಹೆಚ್ಚಿನ ಜವಾಬ್ದಾರಿ ಹೊಂದಿದ್ದವರು ನಮ್ಮ ಪಕ್ಷಕ್ಕೆ ಸೇರಬಯಸಿದಲ್ಲಿ ಅವರ ಅರ್ಜಿಯನ್ನು ನಮ್ಮ ಪಕ್ಷದ ಇಬ್ಬರು ಸದಸ್ಯರು ಶಿಫಾರಸು ಮಾಡಬೇಕು, ಅವರಲ್ಲೊಬ್ಬರು ಕನಿಷ್ಠ 5 ವರ್ಷದಿಂದ ಪಕ್ಷ ಸದಸ್ಯರಾಗಿರಬೇಕು. ಆಕೆಯ/ಆತನ ಸದಸ್ಯತ್ವವನ್ನು ರಾಜ್ಯ ಸಮಿತಿ ಅಥವಾ ಕೇಂದ್ರ ಸಮಿತಿ ಅನುಮೋದಿಸಬೇಕು.

ಕಲಂ **14 :** ಸದಸ್ಯತ್ವ ಶುಲ್ಕ ವರ್ಷಕ್ಕೆ 10 ರೂ. ಆಗಿರುತ್ತದೆ. *ರಾಜ್ಯ ಸಮಿತಿಯ ಮಾರ್ಗದರ್ಶನದಡಿ* ಸಂಬಂಧಪಟ್ಟ ಪಕ್ಷ ಘಟಕವು ಪಕ್ಷಸದಸ್ಯರ ಆರ್ಥಿಕ ಸ್ಥಿತಿಯನ್ನು ಅಂದಾಜಿಸಿದ ನಂತರ ಅವರ ಮಾಸಿಕ ವಂತಿಗೆಯನ್ನು ನಿಗದಿಪಡಿಸುತ್ತದೆ.

## ಅಧ್ಯಾಯ - 4 : ಪಕ್ಷ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳು

### ಪಕ್ಷ ಸದಸ್ಯರ ಕರ್ತವ್ಯಗಳು

ಕಲಂ **15 :** ಆಕೆ/ಆತ ಮಾಲೆಮಾವಾದವನ್ನು ಜೀವಂತ ರೀತಿಯಲ್ಲಿ ಅಧ್ಯಯನ ಮಾಡಬೇಕು ಮತ್ತು ಅನ್ವಯಿಸಬೇಕು. ಭಾರತದ ಕಾನ್‌ಕ್ರೀಟ್ ಪರಿಸ್ಥಿತಿಗೆ ಅನುಸಾರವಾಗಿ ಅವರು ಸೃಜನಶೀಲವಾಗಿಯೂ ದೃಢವಾಗಿಯೂ ಇದ್ದು, ಆಚರಣೆಯಲ್ಲಿ ಸಮರ್ಥರಾಗಿರಬೇಕು. ಆಕೆ/ಆತ ಪಕ್ಷದ ಸೈದ್ಧಾಂತಿಕ, ರಾಜಕೀಯ ಮತ್ತು ಸಂಘಟನಾತ್ಮಕ ಪಥ ಹಾಗೂ ಕೆಲಸದ ಶೈಲಿ ಮತ್ತು ವಿಧಾನಗಳ ಶ್ರೀಮಂತ ಅನುಭವಗಳಿಂದ ತನ್ನ ಪ್ರಜ್ಞಾಮಟ್ಟವನ್ನು ಬೆಳೆಸಿಕೊಳ್ಳಲು ಯತ್ನಿಸಬೇಕು.

ಕಲಂ **16 :** ಆಕೆ/ಆತ ಪಕ್ಷದ ಸೈದ್ಧಾಂತಿಕ ಮತ್ತು ರಾಜಕೀಯ ಬುನಾದಿಯನ್ನು ಸಮರ್ಥಿಸಿಕೊಳ್ಳಬೇಕು ಮತ್ತು *ಬೆಳೆಸಲು ಪ್ರಯತ್ನಿಸಬೇಕು.* ವಿವಿಧ ರೀತಿಯ ಕಾರ್ಮಿಕ ವರ್ಗೇತರ ಪ್ರವೃತ್ತಿಗಳು, ಪರಿಷ್ಕರಣವಾದಿ ನೀತಿಗಳು, ಪ್ರವೃತ್ತಿಗಳು ಮತ್ತು ಕಾರ್ಯಶೈಲಿಗಳು, "ಎಡ" ಮತ್ತು ಬಲ ಅವಕಾಶವಾದ, ಆರ್ಥಿಕವಾದ, *ಸ್ವಪ್ರೇರಣೆ,* ಸಂಸದೀಯವಾದ, ಕಾನೂನುಬದ್ಧವಾದ, ಸುಧಾರಣಾವಾದ, ಉದಾರವಾದ, ಸಂಕುಚಿತವಾದ, ಅನುಭವವಾದ, ಮನೋನಿಷ್ಠವಾದ, ಪಠ್ಯನಿಷ್ಠವಾದ, ಹಾಗೂ ಅರಾಜಕವಾದಿ ಪರಿಕಲ್ಪನೆಗಳು ಮತ್ತು ಪ್ರವೃತ್ತಿಗಳು – ಇವೆಲ್ಲವುಗಳ ವಿರುದ್ಧ ನಿರಂತರವಾಗಿ ಸೈದ್ಧಾಂತಿಕ ಮತ್ತು ರಾಜಕೀಯ ಸಂಘರ್ಷ ನಡೆಸಬೇಕು.

ಕಲಂ **17 :** ಆಕೆ/ಆತ ಪಕ್ಷದ ಮುಖಪತ್ರಿಕೆಗಳು, ದಸ್ತಾವೇಜುಗಳು ಮತ್ತು ಮ್ಯಾಗಝಿನ್ ಗಳನ್ನು ನಿಯತವಾಗಿ ಓದಬೇಕು ಹಾಗೂ ಪಕ್ಷದ ಸಾಹಿತ್ಯವನ್ನು ಜನಪ್ರಿಯಗೊಳಿಸುವುದು ಮತ್ತು ಪಕ್ಷದ ನಿಧಿ ಸಂಗ್ರಹಿಸುವುದರಲ್ಲಿ ಮುಂದೊಡಗು ಹೊಂದಿರಬೇಕು.

ಕಲಂ **18 :** ಪಕ್ಷ ಸದಸ್ಯರು ತಮಗೆ ಸಂಬಂಧಪಟ್ಟ ಪಕ್ಷ ಘಟಕಗಳ ಮತ್ತು ಸಂಘಟನೆಗಳ ದೈನಂದಿನ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿಯೂ ನಿಯತವಾಗಿಯೂ ಪಾಲ್ಗೊಳ್ಳಬೇಕು. ಅವರು ಪಕ್ಷದ ಪಥ, ಕಾರ್ಯಕ್ರಮ, ನೀತಿಗಳು, ತತ್ವಗಳು, ನಿರ್ದೇಶನಗಳು ಮತ್ತು ನಿರ್ಣಯಗಳನ್ನು ಅನುಸರಿಸಬೇಕು.

ಕಲಂ **19 :** ಪ್ರತಿಯೊಬ್ಬ ಸದಸ್ಯರೂ ಸಶಸ್ತ್ರ ವ್ಯವಸಾಯ ಕ್ರಾಂತಿಕಾರಿ ಯುದ್ಧದ, ಅಂದರೆ ಸುದೀರ್ಘ ಪ್ರಜಾಸಮರ ರೂಪದ ವರ್ಗ ಹೋರಾಟದಲ್ಲೂ, ಇನ್ನಿತರ ರೂಪಗಳ ಕ್ರಾಂತಿಕಾರಿ ಸಮೂಹ ಹೋರಾಟಗಳಲ್ಲೂ ಪಾಲ್ಗೊಳ್ಳಲು ಹಾಗೂ ಮುಂಚೂಣಿ ಪಾತ್ರ ವಹಿಸಲು ಸಿದ್ಧರಿರಬೇಕು. ಅವರು ಯುದ್ಧದಲ್ಲಿ ಪಾಲ್ಗೊಳ್ಳಲು ಸಿದ್ಧರಿರಬೇಕು ಹಾಗೂ ರಾಜಕೀಯ ಅಧಿಕಾರ ಗ್ರಹಣಕ್ಕಾಗಿ ನಡೆಯುವ ಸುದೀರ್ಘ ಪ್ರಜಾಸಮರದಲ್ಲಿ ನೇತೃತ್ವ ವಹಿಸಲು ಸಿದ್ಧರಿರಬೇಕು.

ಕಲಂ **20 :** ಆಕೆ/ಆತ ತನ್ನ ವ್ಯಕ್ತಿಗತ ಹಿತಾಸಕ್ತಿಗಳನ್ನು ಪಕ್ಷದ ಮತ್ತು ಜನತೆಯ ಹಿತಾಸಕ್ತಿಗಳಿಗೆ ಅಧೀನಗೊಳಿಸಬೇಕು. ಪಕ್ಷ ಸದಸ್ಯರು ಮಹಾನ್ ಜನಸಮೂಹದ ಹಿತಾಸಕ್ತಿಗಳಿಗಾಗಿ ಹೋರಾಡಬೇಕು, ವಿಶಾಲ ಜನಸಮೂಹದ ಜೊತೆ ಒಂದುಗೂಡಬೇಕು, ಅವರಿಂದ ಕಲಿಯಬೇಕು, ಅವರ ಮೇಲೆ ಅವಲಂಬಿಸಬೇಕು ಹಾಗೂ ವಿಶಾಲ ಜನಸಮೂಹದ ಜೊತೆ ಪಕ್ಷದ ಸಂಬಂಧಗಳನ್ನು ಬಲಪಡಿಸಬೇಕು. ಅವರು ಜನತೆಯ ನಿಜವಾದ ಸೇವಕರಾಗಿರಬೇಕು, ಜನತೆಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಬೇಕು ಹಾಗೂ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಅವರು ಜನತೆಯ ಬಳಿಗೆ ಹೋಗಬೇಕು, ಅಂದರೆ "ಜನಸಮೂಹದಿಂದ ಜನಸಮೂಹಕ್ಕೆ" ಎಂಬ ತತ್ವವನ್ನು ಪಾಲಿಸಬೇಕು. ಆಕೆ/ಆತ ಜನತೆಯ ಸಮಸ್ಯೆಗಳ ಬಗ್ಗೆ ಕಳಕಳಿ ಹೊಂದಿರಬೇಕು, ಅವುಗಳ ಪರಿಹಾರಕ್ಕೆ ಯತ್ನಿಸಬೇಕು, ಅಂಥವೆಲ್ಲ ವಿಚಾರಗಳನ್ನೂ ಸಕಾಲದಲ್ಲಿ ಪಕ್ಷಕ್ಕೆ ತಿಳಿಸಬೇಕು ಹಾಗೂ ಪಕ್ಷದ ಪಥ ಮತ್ತು ನೀತಿಗಳನ್ನು ವಿವರಿಸಬೇಕು. *ಆತ ಆಕೆ ಕಾರ್ಮಿಕ ವರ್ಗೇತರ ವರ್ಗಗಳಿಂದ ಬಂದಿದ್ದಲ್ಲಿ ಅವರು ತಾವಾಗಿಯೇ ಕಾರ್ಮಿಕ ವರ್ಗದ ಸಿದ್ಧಾಂತದಡಿ ವ್ಯವಸಾಯ ಕ್ರಾಂತಿಯ ಭಾಗವಾಗಿ ಪಾಲ್ಗೊಳ್ಳುತ್ತಾ ತಮ್ಮ ಬದುಕನ್ನು ಕಾರ್ಮಿಕ ವರ್ಗ ಜೀವನ ವಿಧಾನವನ್ನು ಅಳವಡಿಸಿಕೊಳ್ಳುತ್ತಾ ಅಪವರ್ಗೀಕರಣಗೊಳ್ಳಬೇಕು.*

ಕಲಂ **21 :** ಜನತೆಗೆ ಲಿಂಗ, ಜಾತಿ, ರಾಷ್ಟ್ರೀಯತೆ, ಧರ್ಮ, *ಜನಾಂಗ,* ಪ್ರದೇಶ, ಬುಡಕಟ್ಟು ಮುಂತಾದವುಗಳನ್ನು ಆಧರಿಸಿದ ಯಾವುದೇ ವಿಧದ ತಾರತಮ್ಯಗಳನ್ನು ಆಕೆ/ಆತ ತಾನೂ ಆಚರಿಸಬಾರದು, ಅಲ್ಲದೆ ಅವುಗಳ ವಿರುದ್ಧ ಮತ್ತು ಆಳುವ ವರ್ಗಗಳ ಒಡೆದಾಳುವ ನೀತಿಗಳ ವಿರುದ್ಧ ಕಾರ್ಮಿಕ ವರ್ಗ ದೃಷ್ಟಿಕೋನದೊಂದಿಗೆ ದಣಿವರಿಯದ ಸಂಘರ್ಷ ನಡೆಸಬೇಕು.

ಕಲಂ **22 :** ಪರಸ್ಪರರಿಗೆ ನೆರವಾಗುವ ಉದ್ದೇಶದೊಂದಿಗೆ ಆಕೆ/ಆತ ಕಾಮ್ರೇಡ್‌ಲೀ ವಿಮರ್ಶೆ-ಆತ್ಮವಿಮರ್ಶೆ ಮೂಲಕ ಸಾಮೂಹಿಕ ಕಾರ್ಯನಿರ್ವಹಣೆಯ ವಿಧಾನವನ್ನು ಬೆಳೆಸಿಕೊಳ್ಳಬೇಕು. ತನ್ನ ಬಗ್ಗೆ ವಿಮರ್ಶೆ ಇಟ್ಟವರು, ತನಗಿಂತ ಭಿನ್ನವಾದ ಅಭಿಪ್ರಾಯಗಳನ್ನು ಹೊಂದಿರುವವರು – ಇಂಥವರ ಜೊತೆ ಕೂಡ ಕೆಲಸ ಮಾಡುವ ಧೋರಣೆಯನ್ನು ಆಕೆ/ಆತ ಹೊಂದಿರಬೇಕು, ಹಾಗೂ ತಮ್ಮನ್ನು ವಿರೋಧಿಸಿದ್ದು, ನಂತರ ಪ್ರಾಮಾಣಿಕವಾಗಿ ತಪ್ಪು ತಿದ್ದಿಕೊಳ್ಳುತ್ತಿರುವವರೂ ಸೇರಿದಂತೆ ಅತಿ ಹೆಚ್ಚಿನ ಬಹುಸಂಖ್ಯಾತರ ಜೊತೆ ಐಕ್ಯತೆ ಸಾಧಿಸಲು ಅವರು ಸಮರ್ಥರಿರಬೇಕು.

ಕಲಂ **23 :** ಆಕೆ/ಆತ ಪಕ್ಷದ ಐಕ್ಯತೆ, ಪಕ್ಷದ ಸಮಿತಿ ಕಾರ್ಯನಿರ್ವಹಣೆ ಹಾಗೂ ಪಕ್ಷ ಶಿಸ್ತುಗಳನ್ನು ತತ್ವ ಮತ್ತು ಆಚರಣೆಗಳೆರಡರಲ್ಲೂ ಒಪ್ಪಿಕೊಳ್ಳಬೇಕು.
ಆಕೆ/ಆತ ಪಕ್ಷದ ರಹಸ್ಯವನ್ನು ಕಾಪಾಡಬೇಕು, ಶತ್ರುವಿನ ದಾಳಿಯ ವಿರುದ್ಧ ಪಕ್ಷವನ್ನು ಮತ್ತು ಅದರ ಮಹೋನ್ನತ ಧ್ಯೇಯೋದ್ದೇಶಗಳನ್ನು

ರಕ್ಷಿಸಿಕೊಳ್ಳಬೇಕು, ಗುಂಪುಗಾರಿಕೆಯ ವಿರುದ್ಧ ಪಕ್ಷದ ಐಕ್ಯತೆಯನ್ನು ರಕ್ಷಿಸಬೇಕು, ತನ್ನ ಕ್ರಾಂತಿಕಾರಿ ಕೆಲಸದ ಬಗ್ಗೆ ವೃತ್ತಿಪರತೆಯನ್ನು ಬೆಳೆಸಿಕೊಳ್ಳಬೇಕು ಹಾಗೂ ತನ್ನ ಕೌಶಲ್ಯಗಳ, ಜ್ಞಾನದ ಮತ್ತು ಕಾರ್ಮಿಕ ವರ್ಗ ದೃಷ್ಟಿಕೋನದ ಮಟ್ಟವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಬೇಕು.

### ಪಕ್ಷ ಸದಸ್ಯರ ಹಕ್ಕುಗಳು

**ಕಲಂ 24 :** ಅ) ಆಯಾ ಸ್ತರಗಳಲ್ಲಿನ ಪಕ್ಷ ಸಮಿತಿಗಳಿಗೆ ಆಯ್ಕೆ ಮಾಡುವ ಮತ್ತು ಆಯ್ಕೆಗೊಳ್ಳುವ ಹಕ್ಕು.

ಆ) ಪಕ್ಷದ ನಿಯತಕಾಲಿಕ ಪತ್ರಿಕೆಗಳು, ದಸ್ತಾವೇಜುಗಳು, ಸುತ್ತೋಲೆಗಳು ಮುಂತಾದವನ್ನು ಪಡೆಯುವ ಹಕ್ಕು; ಪಕ್ಷದ ಸಭೆಗಳಲ್ಲೂ ಪಕ್ಷದ ಪತ್ರಿಕೆಗಳಲ್ಲೂ ಪಕ್ಷದ ರಾಜಕೀಯ ಮತ್ತು ಸಂಘಟನಾತ್ಮಕ ಪಥ, ನೀತಿಗಳು ಮತ್ತು ನಿರ್ಣಯಗಳ ಬಗ್ಗೆ ಹಾಗೂ ಅವುಗಳನ್ನು ಅನುಷ್ಠಾನಗೊಳಿಸುವಾಗ ತಲೆದೋರುವ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಚರ್ಚಿಸುವ ಹಕ್ಕು.

ಇ) ತನ್ನ ಸಮಿತಿ/ಘಟಕದ ನಿರ್ಣಯದೊಂದಿಗೆ ಆ ಸಮಿತಿ/ಘಟಕದ ಯಾರೇಒಬ್ಬ ಸದಸ್ಯನಿಗೆ/ಸದಸ್ಯಳಿಗೆ ಭಿನ್ನಮತ ಇದ್ದ ಸಂದರ್ಭದಲ್ಲಿ ಆಕೆ/ಆತ ಆ ನಿರ್ಣಯವನ್ನು ಜಾರಿ ಮಾಡುವುದಕ್ಕೆ ನಿಷ್ಠರಾಗಿರಬೇಕು, ಆದರೆ ತನ್ನ ಭಿನ್ನಾಭಿಪ್ರಾಯ ಉಳಿಸಿಕೊಳ್ಳಬಹುದು ಹಾಗೂ ಆ ನಂತರದ ಯಾವುದೇ ಸಭೆಯಲ್ಲಿ ಈ ಪ್ರಶ್ನೆಯನ್ನು ಪುನಃ ಬಗೆಹರಿಸುವಂತೆ ಕೇಳಬಹುದು; ಅಥವಾ ತನ್ನ ಅಭಿಪ್ರಾಯವನ್ನು ತನ್ನ ಪಕ್ಷಘಟಕದ ಮೂಲಕ ಕೇಂದ್ರ ಸಮಿತಿಯವರೆಗೂ ಯಾವುದೇ ಮೇಲ್ಸಮಿತಿಗೆ ಪರಿಗಣನೆಗಾಗಿ ಕಳಿಸಬಹುದು. ತನ್ನ ಸಂಬಂಧಿತ ಸಮಿತಿ ಆ ವಿಚಾರವನ್ನು ಆರು ತಿಂಗಳೊಳಗೆ ಬಗೆಹರಿಸದಿದ್ದಲ್ಲಿ ಆಕೆ/ಆತ ಅದನ್ನು *ಕೇಂದ್ರ ಸಮಿತಿ ಸೇರಿದಂತೆ ಮೇಲ್ಸಮಿತಿಗೆ* ನೇರವಾಗಿ ಕೂಡ ಕಳಿಸಲು *ಮತ್ತು ಉತ್ತರ ಪಡೆಯಲು* ಹಕ್ಕಿರುತ್ತದೆ. ಆದರೆ ಆ ವಿಚಾರವನ್ನು ಪುನಃ ತೆರೆಯಬೇಕೇ ಬೇಡವೇ ಎಂಬ ನಿರ್ಧಾರ ಮಾತ್ರ ಆ ಮೇಲ್ಸಮಿತಿಗೆ ಬಿಟ್ಟಿದ್ದು.

ಈ) ಯಾರೇ ಸದಸ್ಯ ತನ್ನ ಘಟಕಕ್ಕೆ ಸೇರಿಲ್ಲದ ಇತರ ಯಾವುದೇ ಸದಸ್ಯರ ಬಗ್ಗೆ ವಿಮರ್ಶೆಯನ್ನು ತನ್ನ ಮೇಲ್ಸಮಿತಿಗೆ ಕಳಿಸಿಕೊಡುವ ಹಕ್ಕು ಹೊಂದಿರುತ್ತಾರೆ. ಕೇಂದ್ರ ಸಮಿತಿಯವರೆಗಿನ ಯಾವುದೇ ಸಮಿತಿ ಕೈಗೊಂಡ ನಿರ್ಣಯಗಳ ಬಗ್ಗೆ ವಿಮರ್ಶೆ ಮತ್ತು ಸಲಹೆಗಳನ್ನು ತನ್ನ ಮೇಲ್ಸಮಿತಿಯ ಮೂಲಕ ಕಳಿಸುವ ಹಕ್ಕು ಪ್ರತಿಯೊಬ್ಬ ಸದಸ್ಯರಿಗೂ ಇರುತ್ತದೆ.

ಉ) ಅಭ್ಯರ್ಥಿ - ಸದಸ್ಯರ ಹಾಗೂ ಪಕ್ಷ ಸದಸ್ಯರ ಹಕ್ಕು ಮತ್ತು ಕರ್ತವ್ಯಗಳಲ್ಲಿ ಒಂದೇ ಒಂದು ವ್ಯತ್ಯಾಸವಿದೆ, ಉಳಿದಂತೆ ಅವು ಒಂದೇ ರೀತಿ ಯಾಗಿರುತ್ತವೆ: ಓಟು ಅಥವಾ ಆಯ್ಕೆ ಮಾಡುವ ಅಥವಾ ಆಯ್ಕೆ ಹೊಂದುವ ಹಕ್ಕು ಅಭ್ಯರ್ಥಿ –ಸದಸ್ಯರಿಗೆ ಇರುವುದಿಲ್ಲ.

ಊ) ಯಾವುದೇ ಪಕ್ಷ ಘಟಕದ ಮೇಲೆ ಅಥವಾ ಪಕ್ಷ ಸದಸ್ಯನ ಮೇಲೆ ಶಿಕ್ಷಾಕ್ರಮ ಜರುಗಿಸುವುದಿದ್ದಲ್ಲಿ ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಿಸಿದ ವಿಸ್ತೃತವಾದ ವಿವರಣೆ ಮತ್ತು ಚರ್ಚೆಯನ್ನು ಅವರುಗಳ ಸಮ್ಮುಖದಲ್ಲೇ ನಡೆಸಬೇಕು ಹಾಗೂ ಕೈಗೊಂಡ ತೀರ್ಮಾನದ ಕುರಿತ ಮಾಹಿತಿಯನ್ನು ಬರಹದಲ್ಲಿ ಮೇಲ್ಸಮಿತಿಗೆ ಕಳಿಸಬೇಕು.

## ಅಧ್ಯಾಯ - 5 : ಪಕ್ಷದ ಸಂಘಟನಾತ್ಮಕ ತತ್ವಗಳು

**ಕಲಂ 25 :** ಅ) ಪ್ರಜಾತಾಂತ್ರಿಕ ಕೇಂದ್ರತ್ವವು ಪಕ್ಷದ ಸಂಘಟನಾತ್ಮಕ ತತ್ವವಾಗಿದೆ. ಪಕ್ಷದ ಸಂರಚನೆ ಮತ್ತು ಆಂತರಿಕ ಜೀವನ ಈ ತತ್ವವನ್ನು ಅವಲಂಬಿಸಿದೆ. ಪಕ್ಷದೊಳಗಣ ಪ್ರಜಾತಂತ್ರವನ್ನು ಆಧರಿಸಿದ ಕೇಂದ್ರತ್ವ ಹಾಗೂ ಕೇಂದ್ರೀಕೃತ ನಾಯಕತ್ವದ ಅಡಿಯಲ್ಲಿ ಪಕ್ಷದೊಳಗಣ ಪ್ರಜಾತಂತ್ರ – ಇವುಗಳನ್ನು ಒಳಗೊಂಡಿರುವುದೇ ಪ್ರಜಾತಾಂತ್ರಿಕ ಕೇಂದ್ರತ್ವ. ತೆರೆದ ಮನಸ್ಸಿನಿಂದ ಚರ್ಚಿಸುತ್ತಲೂ ಹಾಗೂ ಪಕ್ಷದ ಕೆಲಸದಲ್ಲಿ ಒಗ್ಗಟ್ಟಾಗಿ ಇರುತ್ತಲೂ ನಾವು ಎಂತಹದೊಂದು ರಾಜಕೀಯ ವಾತಾವರಣ ನಿರ್ಮಿಸಬೇಕೆಂದರೆ ಅದರಲ್ಲಿ ಪ್ರಜಾತಂತ್ರ ಮತ್ತು ಕೇಂದ್ರತ್ವಗಳೆರಡೂ ಇರಬೇಕು; ಅಂತೆಯೇ, ಶಿಸ್ತು ಮತ್ತು ಸ್ವಾತಂತ್ರ್ಯಗಳೂ, ಸಂಕಲ್ಪದ ಐಕ್ಯತೆ ಹಾಗೂ ವ್ಯಕ್ತಿಗತ ನಿರಾಳತೆ – ಜೀವಂತಿಕೆಗಳೂ ಇವೆಲ್ಲವೂ ಇರಬೇಕು. ಇಂಥದೊಂದು ವಾತಾವರಣದಲ್ಲಿ ಮಾತ್ರವೇ ಪ್ರಜಾತಾಂತ್ರಿಕ ಕೇಂದ್ರತ್ವದ ತತ್ವವನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲು ಸಾಧ್ಯ.

ಆ) ಸಂಘಟನಾತ್ಮಕ ಸಂರಚನೆಗೆ ಸಂಬಂಧಪಟ್ಟ ಅತ್ಯಂತ ಮುಖ್ಯವಾದ ಪ್ರಜಾತಾಂತ್ರಿಕ ಕೇಂದ್ರತ್ವದ ತತ್ವವೆಂದರೆ, ಎಲ್ಲಾ ಸ್ತರಗಳ ನಾಯಕತ್ವ ಸಮಿತಿಗಳನ್ನೂ ಕಡ್ಡಾಯವಾಗಿ ಪ್ರಜಾತಾಂತ್ರಿಕ ಚರ್ಚೆಗಳು, ಸಮ್ಮೇಳನಗಳು ಮತ್ತು ಪ್ಲೀನಂಗಳ ಮೂಲಕವೇ ಚುನಾಯಿಸಬೇಕು. ಎಲ್ಲಾ ಸ್ತರಗಳ ಚುನಾಯಿತ ಸಮಿತಿಗಳಿಗೆ ಉನ್ನತ ಸಮಿತಿಗಳ ಅನುಮೋದನೆ ದೊರೆಯುತ್ತದೆ. ಅತ್ಯಗತ್ಯವಾದ ಅಂಶವೆಂದರೆ, ವ್ಯಕ್ತಿಯು ಸಂಘಟನೆಗೆ ಅಧೀನವಾಗಿರಬೇಕು, ಮೈನಾರಿಟಿಯು ಮೆಜಾರಿಟಿಗೆ ಅಧೀನವಾಗಿರಬೇಕು, ಕೆಳಸ್ತರವು ಮೇಲುಸ್ತರಕ್ಕೆ ಅಧೀನವಾಗಿರಬೇಕು ಹಾಗೂ ಇಡೀ ಪಕ್ಷವು ಕೇಂದ್ರ ಸಮಿತಿಗೆ ಅಧೀನವಾಗಿರಬೇಕು ಎಂಬ ತತ್ವವನ್ನು ಇಡೀ ಪಕ್ಷ ಅನುಸರಿಸಬೇಕು.

ಇ) ಪಕ್ಷದ ನಾಯಕತ್ವ ಸಮಿತಿಗಳು ಸಂಘಟನಾತ್ಮಕ ವರದಿಯನ್ನು ಮಹಾಧಿವೇಶನ/ಸಮ್ಮೇಳನದಲ್ಲಿ ಅಥವಾ ಪ್ಲೀನಂನಲ್ಲಿ ಮಂಡಿಸಬೇಕು. ಈ ಸಮಿತಿಗಳು ಪಕ್ಷದೊಳಗಿನ ಹಾಗೂ ಹೊರಗಿನ – ಎರಡೂ ಕಡೆಯ ಜನರ ಅಭಿಪ್ರಾಯಗಳಿಗೆ ಕಿವಿಗೊಡುತ್ತವೆ ಹಾಗೂ ಅವರಿಗೆ ಉತ್ತರದಾಯಿಯಾಗಿರುತ್ತವೆ. (ಉತ್ತರದಾಯಿ = ಉತ್ತರ ನೀಡ ಬೇಕಾದವರು, ಉತ್ತರ ನೀಡಲು ಜವಾಬ್ದಾರರು. – ಅನು.) ವಿಮರ್ಶೆ ಮಾಡುವ ಹಾಗೂ ತಮ್ಮ ಅಭಿಪ್ರಾಯ/ನಿರ್ಣಯಗಳನ್ನು ಉನ್ನತ ಸಮಿತಿಗಳಿಗೆ ಕಳಿಸುವ ಹಕ್ಕು ಪಕ್ಷ ಸದಸ್ಯರಿಗೆ ಇರುತ್ತದೆ; ಯಾರೇ ಪಕ್ಷ ಸದಸ್ಯನು/ಸದಸ್ಯಳು ಭಿನ್ನವಾದ ಅಭಿಪ್ರಾಯ ಹೊಂದಿದ್ದಲ್ಲಿ ಅದನ್ನು ಮೇಲ್ಸಮಿತಿಗೆ, ಅಗತ್ಯವೆನ್ನಿಸಿದರೆ ಕೇಂದ್ರ ಸಮಿತಿಯವರೆಗೂ ಸಹ, ಕಳಿಸುವ ಹಕ್ಕು ಆಕೆಗೆ/ಆತನಿಗೆ ಇರುತ್ತದೆ.

ಈ) ನಾಯಕತ್ವ ಸಮಿತಿಗಳ ಪ್ರತಿಯೊಬ್ಬ ಸದಸ್ಯರೂ ಒಂದೊಂದು ನಿಗದಿತ ಪ್ರದೇಶಕ್ಕೆ ಮತ್ತು ರಂಗಕ್ಕೆ ನಾಯಕತ್ವ ನೀಡುವ ಜವಾಬ್ದಾರಿ ವಹಿಸಿಕೊಳ್ಳಬೇಕು. ಅದರಿಂದ ಅವರಿಗೆ ನೇರವಾಗಿ ಅನುಭವ ಲಭಿಸುತ್ತದೆ ಹಾಗೂ ಈ ಅನುಭವದಿಂದ ದೊರೆಯುವ ಜ್ಞಾನವು –ಉನ್ನತ ಸಮಿತಿಗಳು ನೀಡಿರುವ ವಿಶೇಷ ಜವಾಬ್ದಾರಿಯನ್ನು ಹೊರತುಪಡಿಸಿ ಇತರ ಸಮಿತಿಗಳಿಗೆ ಮಾರ್ಗದರ್ಶನ ನೀಡಲು ಸಹಾಯಕವಾಗಬಲ್ಲದು. ಕೇಂದ್ರ ಸಮಿತಿಯೂ ಸೇರಿದಂತೆ ಎಲ್ಲಾ ನಾಯಕತ್ವ ಸಮಿತಿಗಳ ಯಾವುದೇ ಸದಸ್ಯರಿಗೆ ಕೇಂದ್ರ ಸಮಿತಿಯು ವಿಶೇಷ ಜವಾಬ್ದಾರಿಯನ್ನು ವಹಿಸಬಹುದು.

ಉ) ನಾಯಕತ್ವ ಸಮಿತಿಗಳು ತಮ್ಮ ಕೆಳಸಮಿತಿಗಳಿಗೆ ನಿಯತವಾಗಿ ವರದಿಗಳನ್ನು ಕಳಿಸಬೇಕು ಹಾಗೂ ತಮ್ಮ ನಿರ್ಧಾರಗಳನ್ನು ತಪ್ಪದೆ ತಿಳಿಸಬೇಕು. ಅಂತೆಯೇ ಎಲ್ಲಾ ಕೆಳಸ್ತರಗಳ ಅಂಗಗಳೂ ಸಹ ತಂತಮ್ಮ ಚಟುವಟಿಕೆಗಳ ಬಗ್ಗೆ ಮೇಲ್ಸಮಿತಿಗಳಿಗೆ ನಿಯತವಾಗಿ ವರದಿಗಳನ್ನು ಕಳಿಸುತ್ತಿರಬೇಕು.

ಊ) ವಿಶೇಷ ಕರ್ತವ್ಯಗಳನ್ನು ವಹಿಸಲಾಗಿರುವವರನ್ನು ಹೊರತುಪಡಿಸಿ, ಪ್ರತಿಯೊಬ್ಬ ಪಕ್ಷಸದಸ್ಯರೂ ಯಾವುದಾದರೊಂದು ಪಕ್ಷ ಘಟಕದ

ಸದಸ್ಯರಾಗಿರಬೇಕು.

ಋ) ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಪ್ರತಿಯೊಬ್ಬ ಪಕ್ಷ ಸದಸ್ಯರೂ ಸಂಬಂಧಪಟ್ಟ ಪಕ್ಷ ಘಟಕದಲ್ಲಿ ಮುಕ್ತವಾಗಿಯೂ ಪರಿಪೂರ್ಣವಾಗಿಯೂ ಚರ್ಚೆ ನಡೆಸಬಹುದು. ಪಕ್ಷದ ನೀತಿಗಳ ಬಗ್ಗೆ ಹಾಗೂ ವಿವಿಧ ಸಮಸ್ಯೆಗಳ ಬಗ್ಗೆ ಆಕೆ/ಆತ ತಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು, ಕೆಲವು ವೇಳೆ ತನ್ನ ಅಂತಿಮ ಅಭಿಪ್ರಾಯವನ್ನು ವ್ಯಕ್ತಪಡಿಸದೆ ಉಳಿಯಬಹುದು – ಅದಕ್ಕೆ ಕಾರಣ ವಿವರಿಸಬೇಕು. ಆದರೆ ಒಮ್ಮೆ ನಿರ್ಣಯಗಳನ್ನು ತೆಗೆದುಕೊಂಡ ನಂತರ ಪ್ರತಿಯೊಬ್ಬರೂ ಅವಕ್ಕೆ ಬದ್ಧರಾಗಿರಬೇಕು. ಇಷ್ಟಾಗಿಯೂ ಯಾರಾದರೂ ಸದಸ್ಯರಿಗೆ ಭಿನ್ನಾಭಿಪ್ರಾಯ ಉಳಿದಿದ್ದಲ್ಲಿ ಅವರು ಅದನ್ನು ಕಾಯ್ದಿರಿಸಿಕೊಳ್ಳಬಹುದು. ಮಹಾಧಿವೇಶನ/ಸಮ್ಮೇಳನದಲ್ಲಿ ಯಾವುದೇ ಪ್ರಶ್ನೆಯ ಬಗ್ಗೆ ಚರ್ಚಿಸಿ ನಿರ್ಣಯ ತೆಗೆದುಕೊಂಡ ನಂತರ ತಕ್ಷಣದಲ್ಲೇ ಅದರ ಬಗ್ಗೆ ಚರ್ಚೆ ಎತ್ತಲು ಅವಕಾಶ ಇರುವುದಿಲ್ಲ.

ಯಾರೇ ಸದಸ್ಯರು ತಮ್ಮ ಸಂಬಂಧಪಟ್ಟ ಸಮಿತಿಗಳಲ್ಲಿ ಹೊಸ ವಿಚಾರಗಳ ಬಗ್ಗೆ ಚರ್ಚೆ ಎತ್ತಬಹುದು. ಒಂದು ವೇಳೆ ಆ ವಿಚಾರಗಳು ಇಡೀ ಪಕ್ಷಕ್ಕೆ ಸಂಬಂಧಿಸಿದವೆಂದು ಅವರಿಗೆ ಅನ್ನಿಸಿದಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ತಮ್ಮ ಸಮಿತಿಗಳ ಮೂಲಕ ಅಥವಾ ವಿಶೇಷ ಸಂದರ್ಭಗಳಲ್ಲಿ ನೇರವಾಗಿಯೇ ಕೇಂದ್ರ ಸಮಿತಿಯವರೆಗೂ ಕಳಿಸಬಹುದು. ಕೇಂದ್ರ ಸಮಿತಿಯ ಮೂರನೇ ಒಂದು ಭಾಗ ಸದಸ್ಯರು ಕೂಡ ಹಾಗೇ ಅಭಿಪ್ರಾಯಪಟ್ಟಲ್ಲಿ ಹಾಗೂ ಅದರ ಪರಿಹಾರಕ್ಕಾಗಿ ಪ್ಲೀನಂ ಕರೆಯಬೇಕೆಂದು ಬಯಸಿದಲ್ಲಿ ಆಗ ಅದನ್ನು ಕಡೇಪಕ್ಷ ರಾಜ್ಯ ಸಮಿತಿಗಳವರೆಗೆ ಸರ್ಕ್ಯುಲೇಟ್ ಮಾಡಲಾಗುತ್ತದೆ. ಬಹುಸಂಖ್ಯಾತ ರಾಜ್ಯ ಸಮಿತಿಗಳು ಈ ಆಗ್ರಹವನ್ನು ಒಪ್ಪಿಕೊಂಡಲ್ಲಿ ಕೇಂದ್ರ ಸಮಿತಿಯು ಪ್ಲೀನಂ ಅನ್ನು ಕರೆಯುತ್ತದೆ. ಇಂತಹ ವಿಶೇಷ ಸಂದರ್ಭಗಳಲ್ಲಿ ಕೂಡ, ಸಮಸ್ಯೆಗಳನ್ನು ಪರಿಹರಿಸುವ ಪ್ರಜಾತಾಂತ್ರಿಕ ವಿಧಾನದ ಅನುಸರಣೆ ನಡೆಯುವಂತೆ ಕೇಂದ್ರ ಸಮಿತಿ ಖಾತ್ರಿಪಡಿಸುತ್ತದೆ.

ೠ) ಕಾರ್ಯತಂತ್ರಕ್ಕೂ ವಿಧಾನಕ್ಕೂ ಇರುವ ವ್ಯತ್ಯಾಸವನ್ನು ಗಮನದಲ್ಲಿ ಇಟ್ಟುಕೊಂಡು, ಪಕ್ಷದ ಸಾಮಾನ್ಯ ಪಥವನ್ನು ಹಾಗೂ ಉನ್ನತ ಸಮಿತಿಗಳು ನೀಡಿರುವ ಕರ್ತವ್ಯಗಳನ್ನು ಅನುಷ್ಠಾನಕ್ಕೆ ತರುವ ಹೊಸ ಹೊಸ ವಿಧಾನಗಳನ್ನು ಅಭಿವೃದ್ಧಿಪಡಿಸಲು ಮುಂದೊಡಗು ತೆಗೆದುಕೊಳ್ಳುವ ಸ್ವಾತಂತ್ರ್ಯ ಪ್ರತಿಯೊಂದು ಘಟಕಕ್ಕೂ ಇರುತ್ತದೆ.

ಎ) ಸದಸ್ಯರೊಬ್ಬರು ಬಂಧನಕ್ಕೊಳಗಾದಾಗ ಅವರ ಎಲ್ಲಾ ಜವಾಬ್ದಾರಿಗಳಿಂದಲೂ ಅವರನ್ನು ಮುಕ್ತಗೊಳಿಸಿ, ಅವರ ಸದಸ್ಯತ್ವವನ್ನು ಪರಿಶೀಲನೆಯಲ್ಲಿ ಇಡಲಾಗುತ್ತದೆ. ಶತ್ರುವಿನ ವಶದಲ್ಲಿ ಅಥವಾ ಜೈಲಿನಲ್ಲಿ ಇದ್ದಾಗ ಅಥವಾ ಜೈಲಿನಿಂದ ಹೊರಬಂದ ನಂತರ ಅವರ ನಡವಳಿಕೆಯನ್ನು ಆಧರಿಸಿ ಅವರ ಸದಸ್ಯತ್ವವನ್ನು ಮುಂದುವರಿಸಲಾಗುತ್ತದೆ (ಪುನಃ ನೀಡಲಾಗುತ್ತದೆ –ಅನು. ) ಅಥವಾ ರದ್ದುಪಡಿಸಲಾಗುತ್ತದೆ. ಒಂದು ವೇಳೆ ಮುಂದುವರಿಸಿದಲ್ಲಿ, ಪಕ್ಷ ಬೇರೆ ರೀತಿ ನಿರ್ಧರಿಸದಿದ್ದರೆ, ಅವರು ಬಂಧನಕ್ಕೆ ಮುಂಚೆ ಸದಸ್ಯರಾಗಿದ್ದ ಪಕ್ಷ ಸಮಿತಿಗೇ ಪುನಃ ಸೇರಿಸಿಕೊಳ್ಳಲಾಗುತ್ತದೆ.

ಏ) ವಿಮರ್ಶೆ-ಆತ್ಮವಿಮರ್ಶೆ ವಿಧಾನವನ್ನು ಎಲ್ಲಾ ಸ್ತರಗಳ ಪಕ್ಷ ಸಮಿತಿಗಳಲ್ಲೂ ಆಚರಿಸಬೇಕು. ಸಮಿತಿಗಳ ಕಾರ್ಯನಿರ್ವಹಣೆಯಲ್ಲಿ ಅಧಿಕಾರಶಾಹಿ, ವ್ಯಕ್ತಿವಾದಿ, ಉದಾರವಾದಿ, ಅತೀತ-ಪ್ರಜಾತಂತ್ರ ಹಾಗೂ ಬಹುಕೇಂದ್ರಿತ ಗುಂಪುಗಾರಿಕೆಯ ಧೋರಣೆ ಮತ್ತು ಪ್ರವೃತ್ತಿಗಳ ವಿರುದ್ಧ ಎಡೆಬಿಡದ ಸಂಘರ್ಷ ನಡೆಯಬೇಕು. ಸಮಿತಿಗಳು ಸಾಮೂಹಿಕ ನಾಯಕತ್ವ ಮತ್ತು ವ್ಯಕ್ತಿಗತ ಜವಾಬ್ದಾರಿಯ ಆಧಾರದ ಮೇಲೆ ಕಾರ್ಯನಿರ್ವಹಿಸ ಬೇಕು.

ಐ) ಇತರರ ತಪ್ಪುಗಳನ್ನು ತಿದ್ದುಪಡಿ ಮಾಡುವಲ್ಲಿ – ಕಾಮ್ರೇಡ್‌ಲೀ ಸಂಬಂಧಗಳು ಮತ್ತು ಪರಸ್ಪರ ಸಹಕಾರದಿಂದ ವ್ಯವಹರಿಸಬೇಕು. ಒಬ್ಬ ಪಕ್ಷ ಸದಸ್ಯರ ಕೆಲಸವನ್ನು ಪಕ್ಷ ಜೀವನದ ಅವರ ಒಟ್ಟಾರೆ ಆಚರಣೆಯ ಆಧಾರದಲ್ಲಿ ಸಮೀಕ್ಷಿಸಬೇಕೇ ಹೊರತು ಗೌಣವಾದ ತಪ್ಪುಗಳ ಅಥವಾ ಕ್ಷುಲ್ಲಕ ವಿಚಾರಗಳ ಆಧಾರದಲ್ಲಲ್ಲ.

ಒ) ದೇಶದ ಆಂತರಿಕ ಮತ್ತು ಅಂತರರಾಷ್ಟ್ರೀಯ ವಿಚಾರಗಳಲ್ಲಿ ನಿರ್ಧಾರ ಕೈಗೊಳ್ಳುವ ಹಕ್ಕು ಇರುವುದು ಕೇಂದ್ರ ಸಮಿತಿಗೆ ಮಾತ್ರ. ವಿವಿಧ ಸ್ತರಗಳಲ್ಲಿ ಸ್ಥಳೀಯ ವಿಚಾರಗಳು ಮತ್ತು ಸಮಸ್ಯೆಗಳ ಬಗ್ಗೆ ನಿರ್ಣಯಗಳನ್ನು ಆಯಾ ಸಮಿತಿಗಳೇ ತೆಗೆದುಕೊಳ್ಳಬೇಕು; ಇದು ಉನ್ನತ ಸಮಿತಿಗಳು ಕೈಗೊಂಡ ನಿರ್ಧಾರಗಳಿಗೆ *ವಿರುದ್ಧವಾಗಿ ಇರಕೂಡದು.*

ಓ) ಒಬ್ಬ ಪಕ್ಷ ಸದಸ್ಯರನ್ನು ಮತ್ತೊಂದು ರೀಜನ್ನಿಗೆ ವರ್ಗಾವಣೆ ಮಾಡಿದಾಗ ಅವರನ್ನು ಆ ರೀಜನ್ನಿನಲ್ಲೂ ಅದೇ ಸ್ಥಾಯಿಯ ಸದಸ್ಯರೆಂದು ಪರಿಗಣಿಸಬೇಕು. ಒಬ್ಬ ಸದಸ್ಯರನ್ನು ಹೀಗೆ ಒಂದು ರೀಜನ್ನಿನಿಂದ ಇನ್ನೊಂದಕ್ಕೆ *ವರ್ಗಾವಣೆ ಮಾಡಿದಾಗ*ಅವರ ಬಗೆಗಿನ ಎಲ್ಲಾ ವಿವರಗಳನ್ನೂ ಸಂಬಂಧಿತ ಘಟಕಕ್ಕೆ ಬರಹದಲ್ಲಿ ಕಳಿಸಿಕೊಡಬೇಕು.

## ಅಧ್ಯಾಯ - 6 : ಪಕ್ಷದ ಶಿಸ್ತು

**ಕಲಂ 26 :** ಪಕ್ಷದ ಐಕ್ಯತೆಯನ್ನು ರಕ್ಷಿಸಿಕೊಳ್ಳಲು, ಸಮರ ಸಾಮರ್ಥ್ಯವನ್ನು ಹೆಚ್ಚಿಸಲು ಹಾಗೂ ಪ್ರಜಾತಾಂತ್ರಿಕ ಕೇಂದ್ರತ್ವದ ನೀತಿಯನ್ನು ಅನುಷ್ಠಾನಗೊಳಿಸಲು ಪಕ್ಷದ ಶಿಸ್ತು ಅತ್ಯಗತ್ಯ. ಉಕ್ಕಿನಂತಹ ಶಿಸ್ತಿಲ್ಲದ ಯಾವುದೇ ಕ್ರಾಂತಿಕಾರಿ ಪಕ್ಷವೂ ಯುದ್ಧದಲ್ಲಿ ಜನಸಮೂಹಕ್ಕೆ ದಕ್ಷ ನಾಯಕತ್ವ ನೀಡಲು ಮತ್ತು ಕ್ರಾಂತಿಯ ಜವಾಬ್ದಾರಿಯನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ. ಪಕ್ಷದ ಶಿಸ್ತು ನಾಯಕತ್ವದಲ್ಲಿರುವವರಿಂದ ಹಿಡಿದು ಎಲ್ಲಾ ಪಕ್ಷ ಸದಸ್ಯರಿಗೂ ಒಂದೇ ರೀತಿಯದಾಗಿರುತ್ತದೆ.

**ಕಲಂ 27 :** ಅ) ಪಕ್ಷದ ಗುರಿ ಮತ್ತು ಧ್ಯೇಯೋದ್ದೇಶಗಳನ್ನು ತಿರಸ್ಕರಿಸುವುದು, ಪಕ್ಷದ ಕಾರ್ಯಕ್ರಮವನ್ನು ಅಥವಾ ಸಂಘಟನಾತ್ಮಕ ಸಂರಚನೆಯನ್ನು ತಿರಸ್ಕರಿಸುವುದು ಅಥವಾ ಅವುಗಳನ್ನು ಉಲ್ಲಂಘಿಸುವುದು ಅಶಿಸ್ತಿನ ನಡವಳಿಕೆಯಾಗುತ್ತದೆ, ಹಾಗೂ ಇಂತಹ ಚಟುವಟಿಕೆಯಲ್ಲಿ ತೊಡಗಿದ ಸದಸ್ಯ ಅಥವಾ ಘಟಕ ಶಿಸ್ತು ಕ್ರಮಕ್ಕೆ ಬಾಧ್ಯರಾಗುತ್ತಾರೆ.

ಆ) ಪಕ್ಷ ಸದಸ್ಯರು ಪಕ್ಷದ ಶಿಸ್ತನ್ನು ಉಲ್ಲಂಘಿಸಿದಾಗ ಸಂಬಂಧಿಸಿದ ಪಕ್ಷ ಘಟಕವು ಸೂಕ್ತ ಶಿಸ್ತುಕ್ರಮಗಳನ್ನು ಮೇಲ್ಸಮಿತಿಯ ಅನುಮೋದನೆಗೆ ಒಳಪಟ್ಟು ಕೈಗೊಳ್ಳುತ್ತದೆ. ಎಚ್ಚರಿಕೆ ನೀಡುವುದು (ವಾರ್ನಿಂಗ್), ಗಂಭೀರ ಎಚ್ಚರಿಕೆ ನೀಡುವುದು, ಪಕ್ಷದ ಹುದ್ದೆಯಿಂದ ಸಸ್ಪೆಂಡ್ ಮಾಡುವುದು, ಪಕ್ಷದ ಹುದ್ದೆಯಿಂದ ತೆಗೆಯುವುದು, ಪಕ್ಷ ಸದಸ್ಯತ್ವವನ್ನು ಸಸ್ಪೆಂಡ್ ಮಾಡುವುದು ಅಥವಾ ರದ್ದು ಮಾಡುವುದು, ಪಕ್ಷದಿಂದ ಉಚ್ಚಾಟಿಸುವುದು ಮುಂತಾದವು ಅಂತಹ ಕೆಲವು ಕ್ರಮಗಳು. ಸದಸ್ಯತ್ವ ರದ್ದು ಮತ್ತು ಪಕ್ಷದಿಂದ ಉಚ್ಚಾಟನೆಯ ಕ್ರಮಗಳು ತಕ್ಷಣದ ಮೇಲ್ಸಮಿತಿಯ ಅನುಮೋದನೆಯ ನಂತರವಷ್ಟೇ ಜಾರಿಗೆ ಬರುತ್ತವೆ. ಪಕ್ಷ ಸದಸ್ಯತ್ವವನ್ನು ಅಮಾನತು ಮಾಡುವಾಗ ಕಾಲಮಿತಿ ವಿಧಿಸಬೇಕು, ಇದು ಒಂದು ವರ್ಷಕ್ಕೆ ಮೀರಿರಬಾರದು. ಅಮಾನತನ್ನು ನಂತರದ ಮೇಲ್ಸಮಿತಿ ಅನುಮೋದಿಸಬೇಕು.

ಇ) ಪಕ್ಷ ಘಟಕವೊಂದು ಶಿಸ್ತು ಉಲ್ಲಂಘಿಸಿದಾಗ ಉನ್ನತ ಸಮಿತಿಗಳು ಅದಕ್ಕೆ ವಾಗ್ದಂಡನೆ ವಿಧಿಸುವುದರಿಂದ ಹಿಡಿದು ಅದನ್ನು ಅಂಶಿಕವಾಗಿ ಪುನರ್‌ರಚಿಸುವವರೆಗಿನ ಯಾವುದೇ ಶಿಸ್ತುಕ್ರಮ ತೆಗೆದುಕೊಳ್ಳುತ್ತವೆ. ಆ ಘಟಕವನ್ನು ವಿಸರ್ಜಿಸಬೇಕಿದ್ದಲ್ಲಿ ನಂತರದ ಮೇಲ್ಸಮಿತಿಯ ಅನುಮೋದನೆ ಅಗತ್ಯ.

ಈ) ಸಿಸಿ ಸದಸ್ಯರು ಪಕ್ಷ ಶಿಸ್ತಿನ ಗಂಭೀರ ಉಲ್ಲಂಘನೆ ಎಸಗಿದರೆ (ಶತ್ರುವಿನ ಏಜೆಂಟರಾಗಿ ವರ್ತಿಸಿದರೆ ಅಥವಾ ಬಹಿರಂಗವಾಗಿ ಪಕ್ಷವಿರೋಧಿ ಚಟುವಟಿಕೆಯಲ್ಲಿ ತೊಡಗಿದಾಗ) ಆಕೆಯನ್ನು/ಆತನನ್ನು ಅವರ ಸ್ಥಾನದಿಂದ ತೆಗೆದುಹಾಕಲು ಅಥವಾ ಆಕೆಯನ್ನು/ಆತನನ್ನು ಪಕ್ಷದಿಂದ ಉಚ್ಚಾಟಿಸಲು ಸಿಸಿಗೆ ಹಕ್ಕಿರುತ್ತದೆ. ಆದರೆ ಈ ಕ್ರಮಕ್ಕೆ ಸಿಸಿ ಸದಸ್ಯರ ಪೈಕಿ ಮೂರನೇ ಎರಡರಷ್ಟು ಮಂದಿಯ ಅನುಮೋದನೆ ಬೇಕಿರುತ್ತದೆ.

ಉ) ಪಕ್ಷ ಘಟಕದ ಮೇಲೆ ಅಥವಾ ಪಕ್ಷ ಸದಸ್ಯರ ಮೇಲೆ ಶಿಸ್ತುಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಅವರಿಗೆ ಅಥವಾ ಆ ಘಟಕಕ್ಕೆ ಆರೋಪ ಪಟ್ಟಿಯನ್ನು ಮುಂಚಿತವಾಗಿ ನೀಡಬೇಕು. ಇಂತಹ ಶಿಸ್ತುಕ್ರಮ ನ್ಯಾಯೋಚಿತವಲ್ಲವೆಂದು ಆ ಸದಸ್ಯ/ಘಟಕ ಭಾವಿಸಿದಲ್ಲಿ ಅದಕ್ಕೆ ಆಕ್ಷೇಪ ಎತ್ತಬಹುದು, ಆ ನಿರ್ಧಾರವನ್ನು ಮರು ವಿಮರ್ಶಿಸುವಂತೆ ಮನವಿ ಮಾಡಬಹುದು ಅಥವಾ ಮೇಲ್ಸಮಿತಿಗೆ ಮೇಲ್ಮನವಿ ಸಲ್ಲಿಸಬಹುದು. ಇಂತಹ ಮೇಲ್ಮನವಿಗಳನ್ನು ಸಂಬಂಧಪಟ್ಟ ಸಮಿತಿಗಳು ತಡಮಾಡದೆ ಮೇಲ್ಸಮಿತಿಗೆ ಕಳಿಸಿಕೊಡಬೇಕು. ತನ್ನ ಸಮಿತಿ/ಘಟಕದಲ್ಲಿ ತನ್ನನ್ನು ಖುದ್ದಾಗಿ ಸಮರ್ಥಿಸಿಕೊಳ್ಳುವ ಹಕ್ಕು ಅಥವಾ ತನ್ನ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುತ್ತಿರುವ ಮೇಲ್ಸಮಿತಿಗೆ ಲಿಖಿತ ವಿವರಣೆ ಸಲ್ಲಿಸುವ ಹಕ್ಕು ಪ್ರತಿಯೊಬ್ಬ ಸದಸ್ಯರಿಗೆ ಇರುತ್ತದೆ.

**ಕಲಂ 28 :** ಅ) ಒಬ್ಬ ಸದಸ್ಯರನ್ನು ಅಥವಾ ಘಟಕವನ್ನು ಚರ್ಚೆ ಮತ್ತು ಮನವೊಲಿಕೆಯ ಮೂಲಕ ಸರಿತಿದ್ದುವ ಎಲ್ಲಾ ಮಾರ್ಗಗಳು ವಿಫಲವಾದಾಗ ಮಾತ್ರವೇ ಶಿಕ್ಷೆ ನೀಡಬೇಕು. ಶಿಕ್ಷೆ ನೀಡಿದ ನಂತರ ಕೂಡ ತಿದ್ದುಪಡಿಗೆ ಪ್ರಯತ್ನಿಸತಕ್ಕದ್ದು. ರೋಗವನ್ನು ಗುಣಪಡಿಸಿ ರೋಗಿಯನ್ನು ಉಳಿಸಿಕೊಳ್ಳುವ ನೀತಿಯನ್ನು ಅನುಸರಿಸಬೇಕು. ವಿಶೇಷ ಸಂದರ್ಭಗಳಲ್ಲಿ ಪಕ್ಷದ ಭದ್ರತೆ (security) ಯನ್ನೂ ಗೌರವವನ್ನೂ ರಕ್ಷಿಸಿಕೊಳ್ಳುವ ಸಲುವಾಗಿ ಆದಷ್ಟೂ ಬೇಗ ಶಿಕ್ಷೆಯನ್ನು ನೀಡಬೇಕು.

ಆ) ಕೆಳಸಮಿತಿಯು ಮೇಲ್ಸಮಿತಿಯ ಸದಸ್ಯರ ವಿರುದ್ಧ ಯಾವುದೇ ಶಿಸ್ತುಕ್ರಮ ಕೈಗೊಳ್ಳುವಂತಿಲ್ಲ. ಆದರೆ, ದ್ವಿಸದಸ್ಯತ್ವವಿರುವ ಸಂದರ್ಭದಲ್ಲಿ ಮೇಲ್ಸಮಿತಿ ಸದಸ್ಯರ ಬಗ್ಗೆ ಆಪಾದನೆ ಮತ್ತು ಸಲಹೆಗಳನ್ನು ಸಂಬಂಧಿತ ಸಮಿತಿಗೆ ಕಳಿಸಬಹುದು.

ಇ) ಒಬ್ಬ ಪಕ್ಷ ಸದಸ್ಯನನ್ನು/ಳನ್ನು ಸದಸ್ಯತ್ವದಲ್ಲಿ ಅಥವಾ ಪಕ್ಷ ಹುದ್ದೆಯಲ್ಲಿ ಮುಂದುವರಿಸಿದರೆ ಅವರು ಮಾಡುತ್ತಿರುವ ಪಕ್ಷದ ಶಿಸ್ತಿನ ತೀವ್ರ ಉಲ್ಲಂಘನೆಯು ಪಕ್ಷಕ್ಕೆ ಗಂಭೀರವಾದ ನಷ್ಟವುಂಟು ಮಾಡುವ ಸಂದರ್ಭವಿದ್ದಾಗ, ಆಕೆಯ/ಆತನ ಸಮಿತಿ ಅಥವಾ ಉನ್ನತ ಸಮಿತಿಗಳು ಆಕೆಯ/ಆತನ ಮೇಲೆ ದೋಷಾರೋಪಣ ಪಟ್ಟಿ ರೂಪಿಸುವುದನ್ನು ಹಾಗೂ ಆಕೆಯ/ಆತನ ವಿವರಣೆ ಪಡೆಯುವುದನ್ನು ಬಾಕಿ (ಪೆಂಡಿಂಗ್) ಇಟ್ಟುಕೊಂಡು ಆಕೆಯನ್ನು/ಆತನನ್ನು ಅವರ ಹುದ್ದೆಯಿಂದ ಇಳಿಸಿ, ಅವರ ಪಕ್ಷ ಸದಸ್ಯತ್ವವನ್ನು ಏಕಾಏಕಿ ಸಸ್ಪೆಂಡ್ ಮಾಡಬಹುದು. ಇಂತಹ ಶಿಸ್ತುಕ್ರಮ ಕೈಗೊಳ್ಳುವಾಗ ಸಂಬಂಧಿತ ಸಮಿತಿಯು ಈ ವಿಚಾರದಲ್ಲಿ ಎಷ್ಟು ಕಾಲಾವಧಿಯ ಒಳಗೆ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು ಎಂಬುದನ್ನು ನಿಗದಿಪಡಿಸಬೇಕು.

ಈ) ಒಬ್ಬ ಪಕ್ಷ ಸದಸ್ಯ ಅಥವಾ ಅಭ್ಯರ್ಥಿ-ಸದಸ್ಯ (ಅಥವಾ ಯಾವುದೇ ಸ್ತರದ ಸದಸ್ಯ) ಆರು ತಿಂಗಳ ಕಾಲ ಪಕ್ಷದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದೆ, ಪಕ್ಷದ ನಿರ್ಧಾರಗಳನ್ನು ಜಾರಿ ಮಾಡದೆ, ಇದಕ್ಕೆ ಸೂಕ್ತ ಕಾರಣವನ್ನೂ ನೀಡದೆ ಇದ್ದರೆ, ಸದಸ್ಯತ್ವವನ್ನು ನವೀಕರಿಸದೆ, ಸದಸ್ಯತ್ವ ಶುಲ್ಕ ಮತ್ತು ವಂತಿಗೆಯನ್ನು ನೀಡದೆ ಇದ್ದರೆ, ಆಕೆ/ಆತ ತನ್ನಿಚ್ಛೆಯಿಂದಲೇ ಪಕ್ಷ ಸದಸ್ಯತ್ವದಿಂದ ಹಿಂತೆಗೆದುಕೊಂಡಿದ್ದಾರೆಂದು ಪರಿಗಣಿಸಬೇಕು ಹಾಗೂ ಆಕೆಯ/ಆತನ ಸದಸ್ಯತ್ವವನ್ನು ಒಂದೋ ಅಮಾನತ್ತು ಅಥವಾ ರದ್ದುಪಡಿಸಬೇಕು.

ಉ) ಪಕ್ಷ ತೆಗೆದುಕೊಳ್ಳುವ ಶಿಸ್ತುಕ್ರಮಗಳ ಪೈಕಿ ಅತ್ಯಂತ ಕಠೋರವಾದುವೆಂದರೆ ಪಕ್ಷದಿಂದ ಉಚ್ಚಾಟನೆ ಹಾಗೂ ಸದಸ್ಯತ್ವದ ರದ್ದತಿ. ಆದ್ದರಿಂದ ಇಂತಹ ನಿರ್ಧಾರಗಳನ್ನು ಕೈಗೊಳ್ಳುವಾಗ ಸಂಬಂಧಿತ ಪಕ್ಷ ಘಟಕವು ಅತ್ಯಂತ ಜಾಗರೂಕತೆ ವಹಿಸಬೇಕು. ಸಂಬಂಧಪಟ್ಟ ಸದಸ್ಯರನ್ನು ಸರಿತಿದ್ದುವ ಎಲ್ಲಾ ಪ್ರಯತ್ನಗಳು ಫಲ ನೀಡದಿದ್ದಾಗ ಮಾತ್ರ ಇಂತಹ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಪಕ್ಷ ಸದಸ್ಯರ ಮೇಲ್ಮನವಿಯನ್ನು ಸಂಬಂಧಿತ ಮೇಲ್ಸಮಿತಿ ಲಕ್ಷ್ಯವಿಟ್ಟು ಪರಿಶೀಲಿಸತಕ್ಕದ್ದು, ಹಾಗೂ ಆಕೆ/ಆತ ತಪ್ಪು ಎಸಗಿದ ಸಂದರ್ಭಗಳನ್ನು ಆಮೂಲಾಗ್ರವಾಗಿ ಸಮೀಕ್ಷಿಸತಕ್ಕದ್ದು. *ಆರ್ಥಿಕ ವಿಚಾರಗಳಲ್ಲಿ ಭ್ರಷ್ಟತೆ, ರಾಜಕೀಯವಾಗಿ ಅಧಃಪತನ ಹೊಂದಿರುವವರು, ದುರ್ನಡತೆ ಹೊಂದಿರುವವರು, ಪಕ್ಷದ ರಹಸ್ಯಕ್ಕೆ ದ್ರೋಹ ಬಗೆಯುವವರು ಶಿಕ್ಷೆಗೆ ಅರ್ಹರಾಗಿರುತ್ತಾರೆ.*

ಊ) ಪಕ್ಷ ಸದಸ್ಯತ್ವ ರದ್ದುಗೊಂಡ ಅಥವ ಪಕ್ಷಕ್ಕೆ ರಾಜೀನಾಮೆ ನೀಡಿದ್ದ ವ್ಯಕ್ತಿಗಳು ಪುನಃ ಪಕ್ಷಕ್ಕೆ ಸೇರಲು ಇಚ್ಛಿಸಿದಲ್ಲಿ, ಸಂಬಂಧಪಟ್ಟ ಸಮಿತಿಗಳು ಆಮೂಲಾಗ್ರವಾಗಿ ತನಿಖೆ ನಡೆಸಿ ನಿರ್ಧಾರ ಕೈಗೊಳ್ಳಬೇಕು. ಕನಿಷ್ಠ ಆರು ತಿಂಗಳ ಕಾಲ ಆಚರಣೆಯ ಮೂಲಕ ಪರೀಕ್ಷಿಸಿದ ನಂತರವಷ್ಟೇ ಸದಸ್ಯತ್ವ ನೀಡಬೇಕು. ಪಕ್ಷದಿಂದ ಉಚ್ಚಾಟನೆಗೊಂಡಿದ್ದ ಸದಸ್ಯರನ್ನು ರಾಜ್ಯ ಸಮಿತಿ ಅಥವಾ ಕೇಂದ್ರ ಸಮಿತಿ ಮಾತ್ರವೇ, ಅವರು ದ್ರೋಹ ಎಸಗಿರದಿದ್ದಲ್ಲಿ, ಪುನಃ ಸೇರಿಸಿಕೊಳ್ಳಬಹುದು. ಆದಾಗ್ಯೂ ಕೆಳಸಮಿತಿಗಳು ಇಂತಹ ಸಂದರ್ಭಗಳಲ್ಲಿ ತಮ್ಮ ಶಿಫಾರ್ಸುಗಳನ್ನು ಕಳಿಸಿಕೊಡಬಹುದು.

## ಅಧ್ಯಾಯ - 7 : ಪಕ್ಷದ ಸಂಘಟನಾತ್ಮಕ ಸಂರಚನೆ

**ಕಲಂ 29 :** ಅ) ಪಕ್ಷ ಸಂಘಟನೆಯನ್ನು ಭೌಗೋಳಿಕ ವಿಭಾಗಗಳಿಗೆ ಅಥವಾ ಉತ್ಪಾದನಾ ವಲಯಗಳಿಗೆ ಅನುಗುಣವಾಗಿ ರಚಿಸಬೇಕು.

ಆ) ಪಕ್ಷವು ವೃತ್ತಿನಿರತರು ಮತ್ತು ಅರೆಕಾಲಿಕರು ಎಂಬ ಎರಡು ರೀತಿಯ ಸದಸ್ಯತ್ವದಿಂದ ಕೂಡಿರುತ್ತದೆ.

**ಕಲಂ 30 :** ವಿವಿಧ ಸ್ತರಗಳಲ್ಲಿ ಪಕ್ಷದ ಸಂರಚನೆ ಈ ಕೆಳಗಿನಂತೆ ಇರುತ್ತದೆ.

ಅ) *ಮಹಾಧಿವೇಶನವು* ಪಕ್ಷದ ಅತ್ಯುನ್ನತ ಅಂಗವಾಗಿರುತ್ತದೆ. *ಎರಡು ಮಹಾಧಿವೇಶನಗಳ ಮಧ್ಯೆ ಕೇಂದ್ರ ಸಮಿತಿಯು ಪಕ್ಷದ ಉನ್ನತ ಅಂಗವಾಗಿರುತ್ತದೆ.* ಅದರ ಕೆಳಗೆ ವಿಶೇಷ ಪ್ರಾದೇಶಿಕ ಸಮಿತಿ (ಎಸ್‌ಎಸಿ)/ ವಿಶೇಷ ವಲಯ ಸಮಿತಿ (ಎಸ್‌ಝಡ್‌ಸಿ)/ರಾಜ್ಯ ಸಮಿತಿ; ರೀಜನಲ್ ಸಮಿತಿ; ವಲಯ (ಝೋನಲ್)/ ಜಿಲ್ಲಾ/ವಿಭಾಗೀಯ (ಡಿವಿಜನಲ್) ಸಮಿತಿ; ಸಬ್-ಝೋನಲ್/ಸಬ್-ಡಿವಿಜನಲ್ ಕಮಿಟಿ; ಪ್ರಾದೇಶಿಕ ಸಮಿತಿ (ಏರಿಯಾ ಕಮಿಟಿ); ಹಾಗೂ, ಗ್ರಾಮ/ಬಸ್ತಿ/ಕಾರ್ಖಾನೆ/ಕಾಲೇಜು ಪಕ್ಷ ಸಮಿತಿಗಳಂತಹ ಸ್ಥಳೀಯ ಮಟ್ಟದ ಸಮಿತಿಗಳಿರುತ್ತವೆ. ಕೋಶವು ಪಕ್ಷದ ಪ್ರಾಥಮಿಕ ಘಟಕವಾಗಿರುತ್ತದೆ. ಪಟ್ಟಣ ಮತ್ತು ನಗರ ಸಮಿತಿಗಳನ್ನು ರಚಿಸಿದಾಗ ಅವುಗಳ ಸ್ಥಾಯಿಯನ್ನು ಸಂಬಂಧಪಟ್ಟ ಮೇಲ್ಸಮಿತಿ ನಿರ್ಧರಿಸುತ್ತದೆ.

ಆ) ಎಲ್ಲಾ ಸಮಿತಿಗಳೂ ತಮ್ಮ ಕಾರ್ಯದರ್ಶಿಗಳನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಚಳುವಳಿಯ ಅಗತ್ಯಗಳಿಗೆ ಅನುಗುಣವಾಗಿ ಹಾಗೂ ಆಯಾ ಸಮಿತಿಯ ಗಾತ್ರಕ್ಕನುಗುಣವಾಗಿ ಎಲ್ಲ ಸಮಿತಿಗಳೂ ಕಾರ್ಯದರ್ಶಿ ಮಂಡಳಿ ಸೆಕ್ರೆಟೇರಿಯೆಟ್)ಗಳನ್ನು ರಚಿಸಿಕೊಳ್ಳಬಹುದು. ಎಲ್ಲಾ ಸಮಿತಿಗಳ ಕಾರ್ಯದರ್ಶಿಗಳೂ, ಸೆಕ್ರೆಟೇರಿಯೆಟ್ಟುಗಳೂ ತಾವು ಯಾವ ಸಮಿತಿಗೆ ಸೇರಿದವರೋ ಆ ಸಮಿತಿಯಷ್ಟೇ ಸ್ತರದವರಾಗಿರುತ್ತಾರೆ ಹಾಗೂ ಅದರಷ್ಟೇ ಹಕ್ಕುಗಳನ್ನು ಹೊಂದಿರುತ್ತಾರೆ. ಆದರೆ ಆ ಕಾರ್ಯದರ್ಶಿಗಳಿಗೆ ಮತ್ತು ಸೆಕ್ರೆಟೇರಿಯೆಟ್ಟುಗಳಿಗೆ ವಿಶೇಷ ಕರ್ತವ್ಯಗಳು ಮತ್ತು ಜವಾಬ್ದಾರಿಗಳಿರುತ್ತವೆ.

ಇ) ಏರಿಯಾ ಸಮಿತಿಯಿಂದ ಮೊದಲ್ಗೊಂಡು ಎಲ್ಲಾ ನಾಯಕತ್ವ ಸಮಿತಿಗಳನ್ನೂ ವೃತ್ತಿನಿರತ ಕ್ರಾಂತಿಕಾರಿಗಳಿಂದಲೇ ರಚಿಸಲಾಗುತ್ತದೆ.

ಈ) ಪಕ್ಷದ ಮಹಾಧಿವೇಶನವು (ಕಾಂಗ್ರೆಸ್) ಇಡೀ ಪಕ್ಷದ *ಪರಮೋಚ್ಚ ಅಂಗವಾಗಿರುತ್ತದೆ.* ಕಾಂಗ್ರೆಸ್ಸಿನಲ್ಲಿ ಚುನಾಯಿತವಾದ ಕೇಂದ್ರ ಸಮಿತಿಯು ಎರಡು ಕಾಂಗ್ರೆಸ್‌ಗಳ ನಡುವಿನ ಕಾಲಾವಧಿಯಲ್ಲಿ ಅತ್ಯುನ್ನತ *ಅಂಗವಾಗಿರುತ್ತದೆ.*

ಉ) ಎಸ್‌ಎಸಿ/ಎಸ್‌ಝಡ್‌ಸಿ/ರಾಜ್ಯ ಸಮ್ಮೇಳನದಲ್ಲಿ ಆಯ್ಕೆಯಾಗಿರುವ ವಿಶೇಷ ಪ್ರಾದೇಶಿಕ ಸಮಿತಿ/ವಿಶೇಷ ವಲಯ ಸಮಿತಿ/ರಾಜ್ಯ ಸಮಿತಿಯು ಎಸ್‌ಎಸಿ/ಎಸ್‌ಝಡ್‌ಸಿ/ರಾಜ್ಯ ಮಟ್ಟದಲ್ಲಿ ಅತ್ಯುನ್ನತ *ಅಂಗವಾಗಿರುತ್ತದೆ.*

ಊ) ರೀಜನಲ್ ಸಮ್ಮೇಳನದಲ್ಲಿ ಆಯ್ಕೆಯಾಗಿರುವ ರೀಜನಲ್ ಕಮಿಟಿ ರೀಜನಲ್ ಮಟ್ಟದಲ್ಲಿ ಅತ್ಯುನ್ನತ *ಅಂಗವಾಗಿರುತ್ತದೆ.* ರೀಜನಲ್ ಸಮಿತಿಯನ್ನು ಚಳುವಳಿಯ ಅಗತ್ಯಗಳಿಗೆ ಅನುಗುಣವಾಗಿ ರಾಜ್ಯವೊಂದರ ವಿಭಜನೆಯ ಮೂಲಕ ಅಥವಾ ವಿವಿಧ ರಾಜ್ಯಗಳ ಕೆಲಕೆಲವು ಭಾಗಗಳನ್ನು ಸೇರಿಸುವ ಮೂಲಕ ರಚಿಸಬಹುದು.

ಋ) ಅಂತೆಯೇ, ಝೋನಲ್/ಜಿಲ್ಲಾ/ವಿಭಾಗೀಯ ಹಾಗೂ ಸಬ್ ಝೋನಲ್/ಸಬ್-ಡಿವಿಜನಲ್ ಕಮಿಟಿಗಳನ್ನು ಆಯಾ ಸ್ತರದ ಸಮ್ಮೇಳನಗಳಲ್ಲಿ ಆಯ್ಕೆ ಮಾಡಲಾಗುತ್ತದೆ. ಏರಿಯ ಮಟ್ಟದ ಸಮ್ಮೇಳನದಲ್ಲಿ ಏರಿಯ ಸಮಿತಿಯನ್ನು ಆಯ್ಕೆ ಮಾಡಲಾಗುತ್ತದೆ.

ೠ) ಪಟ್ಟಣ/ನಗರ ಸಮಿತಿಯನ್ನು ಆಯಾ ಮಟ್ಟದ ಸಮ್ಮೇಳನದಲ್ಲಿ ಆಯ್ಕೆ ಮಾಡಲಾಗುತ್ತದೆ.

ಎ) **ಪಕ್ಷ ಕೋಶ:** ಇದರಲ್ಲಿ ಮೂರ ರಿಂದ ಐವರು ಸದಸ್ಯರಿರುತ್ತಾರೆ;ಒಂದು ಹಳ್ಳಿ ಇಲ್ಲವೇ ಎರಡರಿಂದ ಮೂರು ಹಳ್ಳಿಗಳನ್ನು ಸೇರಿಸಿ, ಅಥವಾ ಒಂದು ಕಾರ್ಖಾನೆ, ಅಥವಾ ಒಂದು ಶಿಕ್ಷಣ ಸಂಸ್ಥೆ, ಅಥವಾ ಒಂದು ಮೊಹಲ್ಲಾ ಇಲ್ಲವೇ ಎರಡು-ಮೂರು ಮೊಹಲ್ಲಾಗಳನ್ನು ಸೇರಿಸಿ ಇವುಗಳನ್ನು ರಚಿಸಲಾಗುತ್ತದೆ. ಸಮೂಹ ಸಂಘಟನೆಗಳ ಘಟಕಗಳಲ್ಲಿ ಕೋಶಗಳನ್ನು ರಚಿಸಲಾಗುತ್ತದೆ.

ಏ) ಆಯಾ ಸ್ತರಗಳಲ್ಲಿ ಆಯ್ಕೆಯಾದ ಸಮಿತಿಗಳು ಎರಡು ಸಮ್ಮೇಳನಗಳ ಅಥವಾ ಮಹಾಧಿವೇಶನಗಳ ನಡುವಿನ ಕಾಲಾವಧಿಯಲ್ಲಿ, ಅತ್ಯುನ್ನತ ಅಂಗಗಳಾಗಿರುತ್ತವೆ.

ಐ) ವಿವಿಧ ರಂಗಗಳಲ್ಲಿನ ಪಕ್ಷ ಚಟುವಟಿಕೆಗಳನ್ನು ದಕ್ಷವಾಗಿ ಮುನ್ನಾಗಿಸುವ ದಕ್ಕಾಗಿ ವಿವಿಧ ಮಟ್ಟಗಳಲ್ಲಿನ ನಾಯಕತ್ವಗಳ ಅಡಿಯಲ್ಲಿ ನಾನಾ ಉಪಸಮಿತಿಗಳು ಮತ್ತು ಆಯೋಗ (commission) ಗಳನ್ನು ರಚಿಸಬಹುದು. ಅವು ಪ್ರಚಾರ, ರಾಜಕೀಯ ಶಿಕ್ಷಣ, ಮಿಲಿಟರಿ ವ್ಯವಹಾರಗಳು, ಸಮೂಹ ಸಂಘಟನೆಗಳು ಮುಂತಾದ ವಿವಿಧ ರಂಗಗಳ ಜವಾಬ್ದಾರಿಗಳನ್ನು ವಹಿಸಿಕೊಳ್ಳಬಹುದು.

## ಮೂಲಭೂತ (basic) ಘಟಕ

**ಕಲಂ 31 :** ಅ) ಪಕ್ಷಕೋಶವು ಪಕ್ಷದ ಮೂಲಭೂತ ಘಟಕವಾಗಿರುತ್ತದೆ. ಪಕ್ಷಕೋಶವನ್ನು ಪ್ರದೇಶವಾರು ಅಥವಾ ವೃತ್ತಿವಾರು ಆಧಾರದಲ್ಲಿ ರಚಿಸಬಹುದು. ಪಕ್ಷಕೋಶಗಳು ದೈನಂದಿನ ಚಟುವಟಿಕೆಗಳಿಗೆ ನ್ಯೂಕ್ಲಿಯಸ್‌ಗಳಾಗಿರುತ್ತವೆ. ಕೋಶಗಳಲ್ಲಿ ಕನಿಷ್ಠ 3ರಿಂದ ಗರಿಷ್ಠ 5 ಮಂದಿ ಸದಸ್ಯರಿರುತ್ತಾರೆ. ಕೋಶಸದಸ್ಯರು ಪೂರ್ಣಪ್ರಮಾಣದ ಸದಸ್ಯರ ರೀತಿಯಲ್ಲೇ ತಮ್ಮ ಜವಾಬ್ದಾರಿಗಳನ್ನು ಮತ್ತು ಕರ್ತವ್ಯಗಳನ್ನು ನೆರವೇರಿಸುತ್ತಾರೆ ಹಾಗೂ ಅವರು (ಅಭ್ಯರ್ಥಿ-ಸದಸ್ಯರನ್ನು ಹೊರತುಪಡಿಸಿ) ಪೂರ್ಣ ಸದಸ್ಯತ್ವದ ಎಲ್ಲಾ ಹಕ್ಕುಗಳನ್ನೂ ಹೊಂದಿರುತ್ತಾರೆ. ಕೋಶ ತನ್ನ ಕಾರ್ಯದರ್ಶಿಯನ್ನು ಆಯ್ಕೆ ಮಾಡಿಕೊಳ್ಳುತ್ತದೆ.

ಆ) ಅಭ್ಯರ್ಥಿ-ಸದಸ್ಯರು ಸಹ ಪಕ್ಷಕೋಶದ ನಿರ್ಣಯಗಳಿಗೆ ಅನುಸಾರ ವಾಗಿಯೇ ಕೆಲಸ ಮಾಡುತ್ತಾರೆ. ಅವರು ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತಾರೆ, ಪಕ್ಷದ ನಿರ್ದೇಶನಗಳನ್ನು ಪಾಲಿಸುತ್ತಾರೆ, ಆದರೆ ನಿರ್ಣಯ ಮಾಡುವಾಗ ಅವರಿಗೆ ಮತದಾನದ ಹಕ್ಕು ಮಾತ್ರ ಇರುವುದಿಲ್ಲ.

ಇ) ಕ್ಷೇತ್ರವಾರು ಪಕ್ಷಕೋಶಗಳನ್ನು ರಚಿಸುವಾಗ ಫ್ಯಾಕ್ಟರಿಗಳಲ್ಲಿ ಮತ್ತು ಸಮೂಹ ಸಂಘಟನೆಗಳಲ್ಲಿ ಪಕ್ಷಕೋಶಗಳನ್ನು ರಚಿಸಲು ಪ್ರಯತ್ನಿಸ ಲಾಗುವುದು.

ಈ) ಒಂದು ಪ್ರದೇಶದಲ್ಲಿ ಎರಡು ಅಥವಾ ಮೂರು ಕೋಶಗಳಿದ್ದಲ್ಲಿ ಎಸಿಗಿಂತ ಕೆಳಗಿನದಾದ ಕಮಿಟಿಯೊಂದನ್ನು ರಚಿಸಬಹುದು. *ಅಂದರೆ ಸ್ಥಳೀಯ ಮಟ್ಟದ ಸಮಿತಿಗಳು (ಹಳ್ಳಿ/ಬಸ್ತಿ/ಫ್ಯಾಕ್ಟರಿ/ಕಾಲೇಜು ಪಕ್ಷ ಸಮಿತಿಗಳು)*

ಉ) ಪಕ್ಷಕೋಶವು ಒಂದು ಪ್ರದೇಶದ ವಿಶಾಲ ಜನಸಮೂಹಕ್ಕೂ ಪಕ್ಷಕ್ಕೂ ನಡುವಿನ ಜೀವಂತ ಕೊಂಡಿಯಾಗಿದೆ. ಕೋಶವು ವಿಶಾಲ ಜನಸಮೂಹದ ಕ್ರಾಂತಿಕಾರಿ ಯುದ್ಧಕ್ಕೆ ಪೂರ್ಣ ಮುಂದೊಡಗಿನೊಂದಿಗೆ ನೇತೃತ್ವ ನೀಡುತ್ತದೆ. ಅದು ಸಮರಶೀಲ ಕಾರ್ಯಕರ್ತರನ್ನೂ ಪಕ್ಷದ ಹಿಂಬಾಲಕರನ್ನೂ ಅರೆ-ವಸಾಹತುಶಾಹಿ, ಅರೆ-ಊಳಿಗಮಾನ್ಯ ನಿರಂಕುಶ ಪ್ರಭುತ್ವ ವ್ಯವಸ್ಥೆಯ ವಿರುದ್ಧದ ಕ್ರಾಂತಿಕಾರಿ ಯುದ್ಧದಲ್ಲಿ ತೊಡಗಿಸುವ ಮೂಲಕ ಒಂದು ಕಾರ್ಖಾನೆಯ, ಒಂದು ಮೊಹಲ್ಲಾದ ಅಥವಾ ಒಂದು ರೈತಾಪಿ ಪ್ರದೇಶದ ಜನಸಮೂಹವನ್ನು ಪಕ್ಷದ ರಾಜಕೀಯ ಪಥ ಮತ್ತು ಧ್ಯೇಯೋದ್ದೇಶಗಳಿಗೆ ನಿಕಟವಾಗಿ ಸೆಳೆಯಲು ಎಡೆಬಿಡದೆ ಪ್ರಯತ್ನಿಸುತ್ತದೆ. ರಹಸ್ಯವಾಗಿ, ಕಾನೂನುಬಾಹಿರವಾಗಿ ಹಾಗೂ ಸುದೀರ್ಘ ಪ್ರಜಾಸಮರದ ವ್ಯೂಹತಂತ್ರ ಮತ್ತು ಕಾರ್ಯತಂತ್ರಗಳಿಗೆ ಅನುಸಾರವಾಗಿ ಕಾರ್ಯ ನಿರ್ವಹಿಸಲು ಜನಸಮೂಹಕ್ಕೆ ಶಿಕ್ಷಣ ನೀಡುವತ್ತ ಅದು ಬಹು ಆರಂಭದಿಂದಲೂ ಒತ್ತು ನೀಡುತ್ತದೆ. 3ರಿಂದ 5 ಮಂದಿ ಕಾರ್ಯಕರ್ತರನ್ನು ಆಯ್ದು ಒಂದು ತಂಡವಾಗಿ (group) ಸಂಘಟಿಸುವುದು, ಅವರಿಗೆ ಪಕ್ಷ ರಾಜಕೀಯದ ಶಿಕ್ಷಣ ನೀಡಿ ಪಕ್ಷದ ಸದಸ್ಯರಾಗಿ ಸದೃಢೀಕರಿಸುವುದು –ಇವು ಪಕ್ಷ ಕೋಶಗಳ ಪ್ರಮುಖ ಜವಾಬ್ದಾರಿಗಳಾಗಿರುತ್ತವೆ.

## ಅಧ್ಯಾಯ - 8 : ಪಕ್ಷದ ಮಹಾಧಿವೇಶನ (ಕಾಂಗ್ರೆಸ್)

**ಕಲಂ 32 :** ಪಕ್ಷದ ಮಹಾಧಿವೇಶನ ನಡೆಸುವುದನ್ನು ಕೇಂದ್ರ ಸಮಿತಿ ನಿರ್ಧರಿಸುತ್ತದೆ. ಪಕ್ಷದ ಕಾಂಗ್ರೆಸ್ಸನ್ನು ಐದು ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ. ವಿಶೇಷ ಸಂದರ್ಭಗಳಲ್ಲಿ ಅದನ್ನು ಮುಂದೂಡಬಹುದು ಅಥವಾ ಮೊದಲೇ ನಡೆಸಬಹುದು; ಈ ಬಗ್ಗೆ ನಿರ್ಣಯವನ್ನು ಕೇಂದ್ರ ಸಮಿತಿಯ ಬಹುಸಂಖ್ಯಾತ ಸದಸ್ಯರು ಕೈಗೊಳ್ಳಬೇಕು.

ಕಲಂ 33 : ಪಕ್ಷ ಕಾಂಗ್ರೆಸ್ಸು ತನ್ನ ನಡಾವಳಿಗಳನ್ನು ನಡೆಸಿಕೊಡುವುದಕ್ಕಾಗಿ ಅಧ್ಯಕ್ಷ ಮಂಡಳಿ (ಪ್ರೆಸೀಡಿಯಂ) ಒಂದನ್ನು ಆಯ್ಕೆ ಮಾಡುತ್ತದೆ ಹಾಗೂ ಈ ಕೆಳಕಂಡ ಕರ್ತವ್ಯಗಳನ್ನು ನೆರವೇರಿಸುತ್ತದೆ:

ಅ) ಅದು ಹಿಂದಿನ ಕಾಂಗ್ರೆಸ್ಸಿನಿಂದ ಪ್ರಸ್ತುತದವರೆಗಿನ ಪಕ್ಷದ ರಾಜಕೀಯ ಮತ್ತು ಸಂಘಟನಾತ್ಮಕ ಸಮೀಕ್ಷೆಯನ್ನು ಕೈಗೊಳ್ಳುತ್ತದೆ.

ಆ) ಅದು ಪಕ್ಷದ ಕಾರ್ಯಕ್ರಮ, ಪಕ್ಷದ ಸಂವಿಧಾನ, ವ್ಯೂಹತಂತ್ರ-ಕಾರ್ಯತಂತ್ರ ಮತ್ತು ಆರ್ಥಿಕ ನೀತಿಗಳನ್ನು ಅಂಗೀಕರಿಸುತ್ತದೆ ಹಾಗೂ *ತಿದ್ದುಪಡಿ ಮಾಡುತ್ತದೆ.* ಇತರ ನೀತಿ ಸೂತ್ರಗಳನ್ನು ರೂಪಿಸುತ್ತದೆ.

ಇ) ದೇಶದೊಳಗಿನ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಅಂದಾಜು ಮಾಡುತ್ತದೆ ಹಾಗೂ ಕರ್ತವ್ಯಗಳನ್ನು ನಿಗದಿಪಡಿಸುತ್ತದೆ.

ಈ) ಕೇಂದ್ರ ಸಮಿತಿಯ ಸದಸ್ಯರ ಸಂಖ್ಯೆಯನ್ನು ನಿರ್ಧರಿಸುತ್ತದೆ ಹಾಗೂ ಕೇಂದ್ರ ಸಮಿತಿಯನ್ನೂ ಪರ್ಯಾಯ ಸಿಸಿ ಸದಸ್ಯರನ್ನೂ ಚುನಾಯಿಸುತ್ತದೆ.

ಉ) ಹಣಕಾಸು ಪತ್ರಗಳನ್ನು ಅನುಮೋದಿಸುತ್ತದೆ.

ಕಲಂ 34 : ಅ) ಕೇಂದ್ರ ಸಮಿತಿಯು ಪಕ್ಷದ ಪ್ರಧಾನ ಕಾರ್ಯದರ್ಶಿಯನ್ನು ಆಯ್ಕೆ ಮಾಡುತ್ತದೆ. ಚಳುವಳಿಯ ಅಗತ್ಯಗಳನ್ನು ಅನುಸರಿಸಿ ಅದು ರಾಜಕೀಯ ಮಂಡಳಿಯನ್ನು ಸಹ ಆಯ್ಕೆ ಮಾಡುತ್ತದೆ. ರಾಜಕೀಯ ಮಂಡಳಿಯು ಕೇಂದ್ರ ಸಮಿತಿಯ ಎರಡು ಸಭೆಗಳ ನಡುವಿನ ಅವಧಿಯಲ್ಲಿ ಪಕ್ಷದ ಪಥಕ್ಕೆ ಹಾಗೂ ಕೇಂದ್ರ ಸಮಿತಿಯ ನಿರ್ಣಯಗಳಿಗೆ ಅನುಸಾರವಾಗಿ ರಾಜಕೀಯ, ಸಂಘಟನಾತ್ಮಕ ಮತ್ತು ಮಿಲಿಟರಿ ನಿರ್ಣಯಗಳನ್ನು ಕೈಗೊಳ್ಳುತ್ತದೆ ಹಾಗೂ ಈ ನಿರ್ಣಯಗಳಿಗೆ ಆ ನಂತರದ ಕೇಂದ್ರ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳುತ್ತದೆ. ಅದು ರೀಜನಲ್ ಬ್ಯೂರೋಗಳು, ಕೇಂದ್ರ ಮಿಲಿಟರಿ ಕಮಿಶನ್ (ಸಿಎಂಸಿ) *ಇತರ ಕಮಿಶನ್‌ಗಳು* ಮತ್ತು ಇತರ ಉಪಸಮಿತಿಗಳನ್ನು ಮತ್ತು ಇಲಾಖೆಗಳನ್ನು ಸಹ ರಚಿಸುತ್ತದೆ. ಪ್ರಧಾನ ಕಾರ್ಯದರ್ಶಿಯು ಪೊಲಿಟ್ ಬ್ಯೂರೋದ ಜವಾಬ್ದಾರಿಯನ್ನು ಸಹ ಹೊಂದಿರುತ್ತಾರೆ.

ಆ) ಪಕ್ಷದ ಮುಖಪತ್ರಿಕೆಗಳನ್ನು ನಡೆಸುವುದಕ್ಕಾಗಿ ಕೇಂದ್ರ ಸಮಿತಿಯು ಪ್ರತಿಯೊಂದು ಪತ್ರಿಕೆಗೂ ಸಂಪಾದಕ ಮಂಡಳಿಗಳನ್ನು ನೇಮಿಸುತ್ತದೆ. ಪ್ರಧಾನ ಕಾರ್ಯದರ್ಶಿ ಕೇಂದ್ರ ಸಮಿತಿಯ ಸೈದ್ಧಾಂತಿಕ (theoretical-ideological) ಪತ್ರಿಕೆಯ ಮುಖ್ಯ ಸಂಪಾದಕರಾಗಿರುತ್ತಾರೆ.

ಕಲಂ 35 : ಕಾಂಗ್ರೆಸ್‌ಗಳ ನಡುವಿನ ಅವಧಿಯಲ್ಲಿ ವಿಶೇಷ ಸಮಸ್ಯೆಗಳನ್ನು ಪರಿಹಾರ ಮಾಡಲು ಕೇಂದ್ರ ಸಮಿತಿಯು ಕೇಂದ್ರೀಯ ಪ್ಲೀನಂಗಳನ್ನು ಏರ್ಪಡಿಸಬಹುದು. ಈ ಪ್ಲೀನಂಗಳು ಆ ಕಾಲಾವಧಿಯಲ್ಲಿನ ಪಕ್ಷದ ಪಥ ಮತ್ತು ನೀತಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ಅಂತೆಯೇ ಕೇಂದ್ರ ಸಮಿತಿಗೆ ಹೊಸ ಸದಸ್ಯರ ಆಯ್ಕೆ ಅಥವಾ ಕೇಂದ್ರ ಸಮಿತಿಯಿಂದ ಸದಸ್ಯರನ್ನು ಕೈಬಿಡುವುದು –ಇಂಥದನ್ನು ಸಹ ಕೇಂದ್ರೀಯ ಪ್ಲೀನಂಗಳು ಕೈಗೊಳ್ಳಬಹುದು. ಅಗತ್ಯವಿದ್ದಾಗಲೆಲ್ಲ ಕೇಂದ್ರ ಸಮಿತಿಯು ತನ್ನ ಸದಸ್ಯ ಸಂಖ್ಯೆಯ ಕಾಲು ಭಾಗವನ್ನು ಮೀರದಂತೆ ಹೊಸ ಸದಸ್ಯರನ್ನು, ಹಾಲಿ ಸದಸ್ಯ ಸಂಖ್ಯೆಯ ಮೂರನೇ-ಎರಡಂಶ ಸದಸ್ಯರ ಒಪ್ಪಿಗೆಯೊಂದಿಗೆ ಕೋ-ಆಪ್ಟ್ ಮಾಡಿಕೊಳ್ಳಬಹುದು.

ಕಲಂ 36 : ಸ್ಪೆಶಲ್ ಏರಿಯಾ/ಸ್ಪೆಶಲ್ ಝೋನಲ್/ರಾಜ್ಯ, ರೀಜನಲ್, ಝೋನಲ್/ಜಿಲ್ಲಾ/ಡಿವಿಜನಲ್ ಮತ್ತು ಪ್ಲೀನಂಗಳನ್ನು ಮೂರು ವರ್ಷಗಳಿಗೊಮ್ಮೆ ನಡೆಸಬೇಕು. ವಿಶೇಷ ಸಂದರ್ಭಗಳಲ್ಲಿ ಅವುಗಳನ್ನು ಇನ್ನೂ ಮೊದಲು ನಡೆಸಬಹುದು ಅಥವಾ ಮುಂದೂಡಬಹುದು. ಆದರೆ ಏರಿಯಾ ಸಮ್ಮೇಳನ/ಪ್ಲೀನಂಗಳನ್ನು ಪ್ರತೀ ಎರಡು ವರ್ಷಗಳಿಗೊಮ್ಮೆ ನಡೆಸಬೇಕು. ಈ ಸಮ್ಮೇಳನಗಳು/ಪ್ಲೀನಂಗಳು ತಂತಮ್ಮ ಸ್ತರಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಚರ್ಚಿಸಿ ನಿರ್ಧಾರಗಳನ್ನು ಕೈಗೊಳ್ಳುತ್ತವೆ, ಪಕ್ಷದ ಪಥ ಮತ್ತು ನೀತಿಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಉನ್ನತ ಸಮಿತಿಗಳಿಗೆ ಕಳಿಸಿಕೊಡುತ್ತವೆ ಹಾಗೂ ಆಯಾ ಮಟ್ಟದ ಸಮಿತಿಗಳನ್ನೂ, ಅಗತ್ಯ ಕಂಡರೆ ಪರ್ಯಾಯ ಸದಸ್ಯರನ್ನೂ ಸಹ ಆಯ್ಕೆ ಮಾಡುತ್ತವೆ.

ಕಲಂ 37 : ಈ ಮೇಲ್ಕಂಡ ಸ್ತರಗಳ ಸಮ್ಮೇಳನಗಳ ನಡುವಿನ ಅವಧಿಗಳಲ್ಲಿ ಅಗತ್ಯವೆನ್ನಿಸಿದರೆ ಪ್ಲೀನಂಗಳನ್ನು ಮೇಲ್ಸಮಿತಿಯ ಅನುಮೋದನೆಯೊಂದಿಗೆ ಏರ್ಪಡಿಸಬಹುದು. ವಿವಿಧ ಸಮಿತಿಗಳ ವ್ಯಾಪ್ತಿಯಡಿ ಬರುವ ಪ್ರದೇಶಗಳಲ್ಲಿನ ಸಮಸ್ಯೆಗಳ ಬಗ್ಗೆ ಆಯಾ ಪ್ಲೀನಂಗಳಲ್ಲಿ ಚರ್ಚಿಸಿ ನಿರ್ಣಯಗಳನ್ನು ತೆಗೆದುಕೊಳ್ಳಬಹುದು. ಆಯಾ ಸಮಿತಿಗಳಿಗೆ ಸದಸ್ಯರನ್ನು ಆಯ್ಕೆ ಮಾಡಬಹುದು ಅಥವಾ ಸದಸ್ಯರನ್ನು ತೆಗೆದುಹಾಕಬಹುದು. ವಿಶೇಷ ಸಂದರ್ಭಗಳ ಕಾರಣ ಯಾವುದೇ ಸಮಿತಿಯ ಪ್ಲೀನಂಅನ್ನು ನಡೆಸಲಾಗದಿದ್ದಲ್ಲಿ ಆಯಾ ಸಮಿತಿಗಳು ತಮ್ಮ ಮೇಲ್ಸಮಿತಿಗಳ ಅನುಮೋದನೆಯ ಮೇರೆಗೆ ತಮ್ಮ ಹಾಲಿ ಸದಸ್ಯ ಬಲದ ಕಾಲುಭಾಗದಷ್ಟು ಸದಸ್ಯರನ್ನು ಕೋ-ಆಪ್ಟ್ ಮಾಡಿಕೊಳ್ಳಬಹುದು.

ಕಲಂ 38 : ಅ) ಕಾಂಗ್ರೆಸ್ಸಿಗೆ ಹಾಗೂ ವಿವಿಧ ಸಮ್ಮೇಳನಗಳಿಗೆ ಪ್ರತಿನಿಧಿ (ಡೆಲಿಗೇಟ್)ಗಳ ಸಂಖ್ಯೆಯನ್ನು ಆಯಾ ಸಮಿತಿಗಳು ಸದಸ್ಯತ್ವ ಸಂಖ್ಯೆಯ ಆಧಾರದಲ್ಲಿ ವಿವಿಧ ಸ್ತರದ ಸಮಿತಿಗಳ ಹಾಗೂ ಕಾಂಗ್ರೆಸ್ಸಿನ ನಿರ್ಣಯಗಳಿಗೆ ಅನುಸಾರವಾಗಿ ನಿರ್ಧರಿಸಬೇಕು.

ಆ) ಕಾಂಗ್ರೆಸ್ಸಿಗೆ ಹಾಗೂ ಇನ್ನಿತರ ವಿವಿಧ ಸ್ತರದ ಸಮ್ಮೇಳನಗಳಿಗೆ ಹಾಜರು ಆಗುತ್ತಿರುವ ಡೆಲಿಗೇಟುಗಳ ಸಂಖ್ಯೆಯ 10%ರಷ್ಟು ಮಂದಿಯನ್ನು ವಿಶೇಷವಾಗಿ ಆಹ್ವಾನಿಸಲು ಆಯಾ ಸಮಿತಿಗಳಿಗೆ ಅಧಿಕಾರವಿರುತ್ತದೆ. ಅಲ್ಲದೆ, ವೀಕ್ಷಕರು ಹಾಗೂ ಓಟುರಹಿತ ಡೆಲಿಗೇಟುಗಳನ್ನು ಸಹ ಆಯಾ ಸಮಿತಿಗಳ ಸಮ್ಮೇಳನಗಳಿಗೆ ಆಹ್ವಾನಿಸಬಹುದು.

ಕಲಂ 39 : ಕಾಂಗ್ರೆಸ್ ಪ್ರಕ್ರಿಯೆ ಪ್ರಾರಂಭವಾಗುವುದಕ್ಕೆ ಮುನ್ನ ಕೇಂದ್ರ ಸಮಿತಿಯು ಕಾಂಗ್ರೆಸ್ಸಿನಲ್ಲಿ ಚರ್ಚಿಸಬೇಕಿರುವ ಸಂಬಂಧಿತ ಕರಡು ದಸ್ತಾವೇಜುಗಳನ್ನು, ಸಿಸಿ ನಿರ್ಣಯಿಸಿರುವ ಪ್ರಕಾರ ಸಾಕಷ್ಟು ಕಾಲಾವಕಾಶದೊಂದಿಗೆ, ಎಲ್ಲಾ ಸದಸ್ಯರಿಗೆ ಒದಗಿಸಬೇಕು. ಕೆಳ ಸಮಿತಿಗಳು ಮತ್ತು ಸದಸ್ಯರು ಸದರಿ ಕರಡುಗಳಿಗೆ ಸೂಚಿಸಿ ಸಲ್ಲಿಸಿರುವ ಎಲ್ಲಾ ತಿದ್ದುಪಡಿ (ಅಮೆಂಡ್‌ಮೆಂಟ್)ಗಳನ್ನು ಕೇಂದ್ರ ಸಮಿತಿಗೆ ಕಳಿಸಬೇಕು; ಕೇಂದ್ರ ಸಮಿತಿ ಅವುಗಳನ್ನು ಪಕ್ಷದ ಕಾಂಗ್ರೆಸ್‌ನಲ್ಲಿ ಮಂಡಿಸುತ್ತದೆ. ಪಕ್ಷ ಕಾಂಗ್ರೆಸ್ಸಿನ ಡೆಲಿಗೇಟುಗಳು ಕರಡು ದಸ್ತಾವೇಜುಗಳಿಗೆ ತಿದ್ದುಪಡಿಗಳನ್ನು ಮಂಡಿಸುವ ಹಕ್ಕು ಹೊಂದಿರುತ್ತಾರೆ. ಕರಡು ದಸ್ತಾವೇಜುಗಳನ್ನು ಓದಿದ ನಂತರ ಯಾವುದೇ ಸಮಿತಿ/ಪ್ರತಿನಿಧಿ/ಪ್ರತಿನಿಧಿಗಳು ಪರ್ಯಾಯ ದಸ್ತಾವೇಜನ್ನು ಮಂಡಿಸಬಯಸಿದಲ್ಲಿ ಅದನ್ನು ಕೂಡಲೇ ಕೇಂದ್ರ ಸಮಿತಿಗೆ ತಿಳಿಸಬೇಕು; ಕೇಂದ್ರ ಸಮಿತಿಯು ಆ ಸಮಿತಿಗೆ/ಪ್ರತಿನಿಧಿಗೆ/ಪ್ರತಿನಿಧಿಗಳಿಗೆ ಅಂತಹ ದಸ್ತಾವೇಜಿನ ಕರಡು ತಯಾರಿಸಲು ಕೊಡಬೇಕಿರುವ ಕಾಲಾವಕಾಶವನ್ನು ನಿರ್ಧರಿಸುತ್ತದೆ. ಸಂಬಂಧಪಟ್ಟ ಸಮಿತಿ/ಪ್ರತಿನಿಧಿ/ಪ್ರತಿನಿಧಿಗಳು ಸಿಸಿ ನಿರ್ಧರಿಸಿದ ನಿಗದಿತ ಕಾಲಾವಧಿಯೊಳಗೆ ದಸ್ತಾವೇಜಿನ ಕರಡು ತಯಾರಿಸಿ ಕೇಂದ್ರ ಸಮಿತಿಗೆ ಸಲ್ಲಿಸಬೇಕು. ಅದನ್ನು ತನ್ನದೇ ಆದ ಟಿಪ್ಪಣಿ (ಕಾಮೆಂಟ್)ಯೊಂದಿಗೆ ಸರ್ಕ್ಯುಲೇಟ್ ಮಾಡುವ ಹಕ್ಕು ಸಿಸಿಗೆ ಇರುತ್ತದೆ.

ಕಲಂ 40 : ಹೊಸದಾಗಿ ರಚಿಸಬೇಕಿರುವ ಕೇಂದ್ರ ಸಮಿತಿಯ ಸದಸ್ಯರ ಯಾದಿ (ಪ್ಯಾನೆಲ್-ಪಟ್ಟಿ)ಯೊಂದನ್ನು ಹೊರಹೋಗುತ್ತಿರುವ ಕೇಂದ್ರ ಸಮಿತಿಯು ಕಾಂಗ್ರೆಸ್ಸಿನ ಮುಂದೆ ತನ್ನ ಪ್ರಸ್ತಾವದ ರೂಪದಲ್ಲಿ ಮಂಡಿಸುತ್ತದೆ. ಈ ಯಾದಿಯಲ್ಲಿನ ಯಾವುದೇ ಹೆಸರಿನ ಬಗ್ಗೆ ಆಕ್ಷೇಪವೆತ್ತುವ ಹಕ್ಕು ಪ್ರತಿಯೊಬ್ಬ ಡೆಲಿಗೇಟಿಗೂ ಇರುತ್ತದೆ; ಅಥವಾ ಅವರು ಬೇರೆಯದೇ ಯಾದಿಯೊಂದನ್ನು ಪ್ರಸ್ತಾವಿಸ ಬಹುದು – ಆದರೆ ಅದರಲ್ಲಿ ಅವರು ಯಾವ ಸದಸ್ಯರ ಹೆಸರನ್ನು ಪ್ರಸ್ತಾವಿಸುತ್ತಾರೋ ಅವರಿಂದ ಮೊದಲು ಒಪ್ಪಿಗೆ ಪಡೆದಿರಬೇಕು. ಹೀಗೆ ಯಾವುದೇ ಪರ್ಯಾಯ ಪ್ರಸ್ತಾವಗಳಿಲ್ಲದಿದ್ದಲ್ಲಿ, ಹೊರಹೋಗುವ

ಸಿಸಿ ಮಂಡಿಸಿದ ಪ್ಯಾನೆಲ್ಲಿಗೆ ಕಾಂಗ್ರೆಸ್ಸಿನ ಒಪ್ಪಿಗೆಯನ್ನು ಕೈ ಎತ್ತುವ ಮೂಲಕ ಪಡೆದುಕೊಳ್ಳಲಾಗುತ್ತದೆ. ಒಂದು ವೇಳೆ ಪರ್ಯಾಯ ಪ್ರಸ್ತಾವಗಳಿದ್ದಲ್ಲಿ, ಸಿಸಿ ಸೇರಿದಂತೆ ಎಲ್ಲಾ ಸಮಿತಿಗಳನ್ನೂ ರಹಸ್ಯ ಮತದಾನದ ಮೂಲಕ ಚುನಾಯಿಸಬೇಕು.

**ಕಲಂ 41 :** *ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಮಾರ್ಗದರ್ಶಿ ಸೂತ್ರಗಳನ್ನು ಕೇಂದ್ರ ಸಮಿತಿಯು ನೀಡುತ್ತದೆ ಮತ್ತು ಕೆಳಗಿನ ಸಮಿತಿಗಳು ಅವುಗಳನ್ನು ಅಳವಡಿಸಬೇಕು.*

## ಅಧ್ಯಾಯ - 9 : ಕೇಂದ್ರ ಸಮಿತಿಯ ಹಕ್ಕುಗಳು ಮತ್ತು ಕರ್ತವ್ಯಗಳು

**ಕಲಂ 42 :** ಕೇಂದ್ರ ಸಮಿತಿಯನ್ನು ಪಕ್ಷ ಕಾಂಗ್ರೆಸ್ಸು ಚುನಾಯಿಸುತ್ತದೆ. ಎರಡು ಕಾಂಗ್ರೆಸ್‌ಗಳ ನಡುವಿನ ಕಾಲಾವಧಿಯಲ್ಲಿ ಕೇಂದ್ರ ಸಮಿತಿಯೇ ಪಕ್ಷದ ಅತ್ಯುನ್ನತ ನಾಯಕತ್ವ ಅಂಗವಾಗಿರುತ್ತದೆ. ಕೇಂದ್ರ ಸಮಿತಿಯು ಇಡೀ ಪಕ್ಷವನ್ನು ಪ್ರತಿನಿಧಿಸುತ್ತದೆ ಹಾಗೂ ಅದು ನಿರ್ಣಾಯಕವಾದ ನಿರ್ಧಾರಗಳನ್ನು ಪಕ್ಷದ ಪರವಾಗಿ ಸಂಪೂರ್ಣ ಅಧಿಕಾರದೊಂದಿಗೆ ಕೈಗೊಳ್ಳಬಹುದು. ಕೇಂದ್ರ ಸಮಿತಿ ಕಡೇಪಕ್ಷ ವರ್ಷಕ್ಕೆ ಒಂದು ಬಾರಿಯಾದರೂ ಸಭೆ ಸೇರಬೇಕು.

**ಕಲಂ 43 :** ಪಕ್ಷದ ಸರಾಗವಾದ ಕಾರ್ಯನಿರ್ವಹಣೆಗಾಗಿ ಕೇಂದ್ರ ಸಮಿತಿಯು ಪೊಲಿಟ್‌ಬ್ಯೂರೋ, ಕೇಂದ್ರೀಯ ಮಿಲಿಟರಿ ಕಮಿಶನ್, ರೀಜನಲ್ ಬ್ಯೂರೋಗಳು ಮತ್ತು ನಾನಾ ರೀತಿಯ ಉಪ ಸಮಿತಿಗಳನ್ನು ರಚಿಸಬಹುದು. ಪಿಬಿಯು ಸಿಸಿಯದೇ ಸ್ತರದ್ದಾಗಿದ್ದು, ಅದರಷ್ಟೇ ಹಕ್ಕುಗಳನ್ನು ಹೊಂದಿರುತ್ತದೆ. ಆದರೆ, ಅದಕ್ಕೆ ವಿಶೇಷ ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಇರುತ್ತವೆ ಹಾಗೂ ಅವುಗಳನ್ನು ಅದು ಎರಡು ಸಿಸಿ ಸಭೆಗಳ ನಡುವಿನ ಕಾಲಾವಧಿಯಲ್ಲಿ ಸಿಸಿಯ ಪರವಾಗಿ ನೆರವೇರಿಸುತ್ತದೆ.

**ಕಲಂ 44 :** ಶಿಸ್ತಿನ ತೀವ್ರ ಉಲ್ಲಂಘನೆ, ಗಂಭೀರವಾದ ಪಕ್ಷವಿರೋಧಿ ಚಟುವಟಿಕೆಗಳು ಮತ್ತು ನೀಚ ಗುಂಪುಗಾರಿಕೆ ಚಟುವಟಿಕೆಗಳಿಗಾಗಿ ಯಾರೇ ಸಿಸಿ ಸದಸ್ಯರನ್ನು ತೆಗೆದುಹಾಕಲು ಕೇಂದ್ರ ಸಮಿತಿ ಕ್ರಮ ಕೈಗೊಳ್ಳಬಹುದು. ಹೀಗೆ ಶಿಕ್ಷೆಗೊಳಗಾಗುವ ಸದಸ್ಯರಿಗೆ ಕಾಂಗ್ರೆಸ್ಸಿನೆದುರು ಮೇಲ್ಮನವಿ ಸಲ್ಲಿಸುವ ಹಕ್ಕಿರುತ್ತದೆ. ಈ ವಿಚಾರ ತೀರ್ಮಾನ/ಇತ್ಯರ್ಥ ಆಗುವವರೆಗೂ ಕೇಂದ್ರ ಸಮಿತಿಯ ತೀರ್ಮಾನವೇ ಜಾರಿಯಲ್ಲಿರುತ್ತದೆ. ಕೇಂದ್ರ ಸಮಿತಿಯ ಮೂರನೇ ಎರಡು ಭಾಗ ಸದಸ್ಯರು ಒಪ್ಪಿದರೆ, ಅವರು ಯಾರೇ ಸಿಸಿ ಸದಸ್ಯರನ್ನು ಹೊರಹಾಕುವ ನಿರ್ಣಯ ಕೈಗೊಳ್ಳಬಹುದು.

**ಕಲಂ 45 :** ಕೇಂದ್ರ ಸಮಿತಿಯ ಯಾವುದೇ ಹುದ್ದೆ ಖಾಲಿಯಿದ್ದರೆ ಅಥವಾ ಚಳುವಳಿಯ ಅಗತ್ಯಕ್ಕೆ ಅನುಗುಣವಾಗಿ ಯಾರೇ ಸದಸ್ಯರನ್ನು ಕೇಂದ್ರ ಸಮಿತಿ ಕೋ–ಆಪ್ಟ್ ಮಾಡಿಕೊಳ್ಳಬಹುದು. ಹೀಗೆ ಅಗತ್ಯ ಬಿದ್ದಾಗ ಅದು ತನ್ನ ಹಾಲಿ ಸದಸ್ಯ ಬಲದ ಮೂರನೇ ಎರಡು ಭಾಗ ಸದಸ್ಯರ ಅನುಮೋದನೆಯೊಂದಿಗೆ ತನ್ನ ಸಂಖ್ಯೆಯ ಕಾಲುಭಾಗಕ್ಕೆ ಮೀರದಂತೆ ಕೋ-ಆಪ್ಟ್ ಮಾಡಿಕೊಳ್ಳಬಹುದು. ಆದರೆ ಇದನ್ನು ಮುಂದಿನ ಕಾಂಗ್ರೆಸ್ಸು ಅನುಮೋದಿಸಬೇಕು. ಪರ್ಯಾಯ ಸದಸ್ಯರನ್ನೇ ಕೋ-ಆಪ್ಟ್ ಮಾಡಿಕೊಳ್ಳಬೇಕು; ಪರ್ಯಾಯ ಸದಸ್ಯರು ಇಲ್ಲದಿದ್ದಾಗ ಇತರರನ್ನು ಸಿಸಿ ಕೋ-ಆಪ್ಟ್ ಮಾಡಿಕೊಳ್ಳಬಹುದು.

**ಕಲಂ 46 :** ಸಿಸಿ ಕಾರ್ಯದರ್ಶಿಯು ಕೇಂದ್ರ ಸಮಿತಿ ಸಭೆಯ ತಾರೀಖು ಮತ್ತು ಸಮಯವನ್ನು ನಿಗದಿಪಡಿಸುತ್ತಾರೆ ಹಾಗೂ ಸಭೆಯ ಅಜೆಂಡಾವನ್ನು ಮುಂಚಿತವಾಗಿ ಒದಗಿಸುತ್ತಾರೆ. ಕೇಂದ್ರ ಸಮಿತಿಯ ಮೂರನೇ ಒಂದು ಭಾಗ ಸದಸ್ಯರು ಕೇಂದ್ರ ಸಮಿತಿ ಸಭೆಗಾಗಿ ಆಗ್ರಹಪಟ್ಟರೆ ಆಗ ಕಾರ್ಯದರ್ಶಿ ಸಭೆ ಕರೆಯಬೇಕಾಗುತ್ತದೆ.

**ಕಲಂ 47 :** ಯಾವುದೇ ಘಟಕದ ಅಥವಾ ಯಾವುದೇ ಪ್ರದೇಶದ ಕೆಲಸದ ಪರಿಶೀಲನೆಗಾಗಿ ತನ್ನ ಯಾರೇ ಸದಸ್ಯನನ್ನು/ಳನ್ನು ಅಥವಾ ಸದಸ್ಯರನ್ನು ಕಳಿಸುವ ಹಕ್ಕು ಸಿಸಿ ಅಥವಾ ಪೊಲಿಟ್‌ಬ್ಯೂರೋಗೆ ಇರುತ್ತದೆ. ಯಾವುದೇ ಸ್ತರದ ಯಾವುದೇ ಸಮಿತಿಯನ್ನು ವಿಸರ್ಜಿಸಿ ಆ ಮೂಲಕ ಯಾವುದೇ ಸಂಘಟನಾ ಸಮಿತಿ ರಚಿಸುವ ಹಕ್ಕು ಕೇಂದ್ರ ಸಮಿತಿಗಿರುತ್ತದೆ.

**ಕಲಂ 48 :** ಅಗತ್ಯಬಿದ್ದಲ್ಲಿ ಕೇಂದ್ರ ಸಮಿತಿಯು ಎರಡು ಕಾಂಗ್ರೆಸ್‌ಗಳ ನಡುವೆ ವಿಶೇಷ ಸಮ್ಮೇಳನಗಳನ್ನೂ ಪ್ಲೀನಂಗಳನ್ನೂ ಏರ್ಪಡಿಸಬಹುದು. ಸಿಸಿಎಂಗಳಲ್ಲದೆ ಈ ಪ್ಲೀನಂನಲ್ಲಿ ಪಾಲ್ಗೊಳ್ಳುವ ವಿವಿಧ ಸಮಿತಿಗಳ ಇತರ ಸದಸ್ಯರನ್ನು ಕೇಂದ್ರ ಸಮಿತಿ ನಿರ್ಧರಿಸುತ್ತದೆ.

## ಅಧ್ಯಾಯ - 10 : ಪಕ್ಷದೊಳಗೆ ಆಂತರಿಕ ವಾಗ್ವಾದಗಳು (debates)

**ಕಲಂ 49 :** ಇಡೀ ಪಕ್ಷವನ್ನು ಸೈದ್ಧಾಂತಿಕವಾಗಿ, ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಐಕ್ಯಗೊಳಿಸಲು ಹಾಗೂ ನಮ್ಮ ವಿಧಾನಗಳನ್ನು ಸುಧಾರಿಸಲು ಆಳವಾದ ಚರ್ಚೆಗಳನ್ನು ನಡೆಸುವುದು ಅತ್ಯಗತ್ಯ. ಇದು ಪಕ್ಷ ಸದಸ್ಯರ ಪ್ರಜಾತಾಂತ್ರಿಕ ಹಕ್ಕು ಸಹ ಹೌದು. ಪಕ್ಷದ ವಿವಿಧ ಸ್ತರಗಳಲ್ಲಿ ನಾವು ಕಾರ್ಯತಂತ್ರಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಆಯಾ ಸಮಿತಿಗಳಲ್ಲಿ ತೆರೆದ ಮನಸ್ಸಿನಿಂದ ಮತ್ತು ಯಾವುದೇ ಅಡೆತಡೆಗಳಿಲ್ಲದೆ ಚರ್ಚಿಸುವ ಮೂಲಕ ಪರಿಹರಿಸಲು ಶ್ರಮಿಸಬೇಕು. ಅಗತ್ಯವಿದ್ದಾಗ ಮೇಲ್ಸಮಿತಿಗಳ ಸಹಾಯವನ್ನು ಮತ್ತು ಸಲಹೆಗಳನ್ನು ತೆಗೆದುಕೊಳ್ಳಬೇಕು. ಪ್ರಜಾತಾಂತ್ರಿಕ ಹಕ್ಕುಗಳ ಹೆಸರಿನಲ್ಲಿ ಯಾವುದಾದರೊಂದು ನಿರ್ದಿಷ್ಟ ವಿಷಯದ ಮೇಲೆ ಕೊನೆಯಿಲ್ಲದ ಚರ್ಚೆಗಳು ಪಕ್ಷದ ಕಾರ್ಯನಿರ್ವಹಣೆಗೆ ಹಾನಿಯುಂಟುಮಾಡುತ್ತವೆ. ಆದ್ದರಿಂದ ಯಾವುದೇ ರೀತಿಯ ವಿವಾದಾತ್ಮಕ ವಾಗ್ವಾದಕ್ಕೆ ಅಥವಾ ಚರ್ಚೆಗೆ, ಸಂಬಂಧಿತ ಸಮಿತಿಯ ಮೂರನೇ ಎರಡು ಭಾಗ ಸದಸ್ಯರ ಒಪ್ಪಿಗೆಯಿದ್ದರೆ ಮಾತ್ರ ಅವಕಾಶ ನೀಡಬಹುದು.

**ಕಲಂ 50 :** ಯಾರೇ ಸದಸ್ಯರಿಗೆ ಅಥವಾ ಯಾವುದೇ ಸಮಿತಿಗೆ ಪಕ್ಷದ ಮೂಲಭೂತ ಪಥದ ಬಗ್ಗೆ ಭಿನ್ನನಿಲುವುಗಳು ಇದ್ದಲ್ಲಿ ಹಾಗೂ ಆತ/ಆಕೆ ಆ ನಿಲುವುಗಳನ್ನು ಪಕ್ಷದೊಳಗೆ ಸರ್ಕ್ಯುಲೇಟ್ ಮಾಡಬೇಕೆಂದು ಆಗ್ರಹಿಸಿದಲ್ಲಿ, ಈ ಆಗ್ರಹವನ್ನು ಒಪ್ಪುವ ಅಥವಾ ತಿರಸ್ಕರಿಸುವ ಕುರಿತು ಅಂತಿಮ ನಿರ್ಧಾರ ಕೈಗೊಳ್ಳುವ ಹಕ್ಕು ಕೇಂದ್ರ ಸಮಿತಿಗೆ ಇರುತ್ತದೆ.

**ಕಲಂ 51 :** ಯಾರೇ ಕೇಂದ್ರ ಸಮಿತಿ ಸದಸ್ಯನಿಗೆ/ಸದಸ್ಯಳಿಗೆ ಅಖಿಲ ಭಾರತ ಅಥವಾ ಅಂತರರಾಷ್ಟ್ರೀಯ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಭಿನ್ನ ನಿಲುವುಗಳಿದ್ದು, ಆಕೆ/ಆತ ಈ ವಿಚಾರವನ್ನು ಇಡೀ ಪಕ್ಷದೊಳಗೆ ಚರ್ಚೆಗೆ ಒಯ್ಯುವ ಆಗ್ರಹ ಮುಂದಿಟ್ಟಲ್ಲಿ, ಅವುಗಳನ್ನು ಕೇಂದ್ರ ಸಮಿತಿಯ ಮೂರನೇ ಒಂದು ಭಾಗ *ಸದಸ್ಯರು ಒಪ್ಪಿದಲ್ಲಿ* ರಾಜ್ಯ/ರೀಜನಲ್ ಕಮಿಟಿ ಅಥವಾ ಯಾವುದೇ ಸ್ತರದವರೆಗೆ ಕಳಿಸಲಾಗುವುದು. ಆದರೆ *ಯಾವುದೇ* ಸಮಿತಿ ಸದಸ್ಯರು ತಮ್ಮ ಭಿನ್ನ ನಿಲುವುಗಳನ್ನು ಕೇಂದ್ರ ಸಮಿತಿಯ ಅನುಮತಿಯಿಲ್ಲದೆ ಕೆಳ ಸಮಿತಿಗಳಿಗೆ ಕಳಿಸಬಾರದು.

**ಕಲಂ 52 :** ಯಾವುದೇ ಕೆಳಸಮಿತಿ ಅಥವಾ ಅದರ ಸದಸ್ಯರು ಕೇಂದ್ರ ಸಮಿತಿಯ ರಾಜಕೀಯ ಮತ್ತು ಸಂಘಟನಾತ್ಮಕ ಪಥದ ಬಗ್ಗೆ ಭಿನ್ನ ನಿಲುವನ್ನು ಹೊಂದಿದಲ್ಲಿ, ಅವರು ತಮ್ಮ ನಿಲುವುಗಳನ್ನು ಪಕ್ಷ ಸಮಿತಿ ಕಾರ್ಯನಿರ್ವಹಣೆಗೆ ಅನುಸಾರವಾಗಿ ಕೇಂದ್ರ ಸಮಿತಿಗೆ ಕಳಿಸಬಹುದು. ಅಗತ್ಯವೆನ್ನಿಸಿದರೆ ಕೇಂದ್ರ ಸಮಿತಿ ಈ ನಿಲುವುಗಳನ್ನು ತನ್ನದೂ ಅಭಿಪ್ರಾಯಗಳೊಂದಿಗೆ ಸೇರಿಸಿ ಇಡೀ ಪಕ್ಷಕ್ಕೆ ಕಳಿಸಬಹುದು.

**ಕಲಂ 53 :** ಕೇಂದ್ರ ಸಮಿತಿಯ ನಿಯಂತ್ರಣ ಅಥವಾ ನಿರ್ದೇಶನದಡಿ ಪಕ್ಷದೊಳಗೆ ನಡೆವ ಎಲ್ಲಾ ವಾಗ್ವಾದಗಳನ್ನು ಸ್ಪೆಶಲ್ ಏರಿಯ/ರಾಜ್ಯ/ರೀಜನಲ್ ಮತ್ತು ಝೋನಲ್ ಕಮಿಟಿಗಳಿಗೆ ಅಥವಾ ಪಕ್ಷದ ಎಲ್ಲಾ ಸ್ತರಗಳಿಗೆ ಕಳಿಸಬೇಕು.

## ಅಧ್ಯಾಯ - 11 : ಪ್ರಜಾಸೇನೆಯೊಳಗೆ ಪಕ್ಷ ಕಾರ್ಯನಿರ್ವಹಣೆ

**ಕಲಂ 54 :** ಪ್ರಜಾಸೇನೆಯು ಪಕ್ಷದ ಮುಖ್ಯವಾದ ಸಾಧನ. ಆದ್ದರಿಂದ ಪಕ್ಷವು ಕ್ರಾಂತಿಯ ಕರ್ತವ್ಯವನ್ನು ಈಡೇರಿಸುವಲ್ಲಿ ಜನತೆಯನ್ನು ಜಾಗೃತಗೊಳಿಸಲು, ಅಣಿನೆರೆಸಲು, ಸಂಘಟಿಸಲು ಮತ್ತು ಸಶಸ್ತ್ರಗೊಳಿಸಲು ಈ ಸಾಧನವನ್ನು ಬಳಸುತ್ತದೆ. ಪ್ರಜಾಸೇನೆಯು ಸಾಮಾಜಿಕ ಉತ್ಪಾದನೆಯಲ್ಲೂ ಪಾಲ್ಗೊಳ್ಳುತ್ತದೆ. ಪ್ರಜಾಸೇನೆಯನ್ನು ಅತ್ಯುನ್ನತ ಆಯುಧವಾಗಿ ಹೊಂದಿರುವ ಸುದೀರ್ಘ ಪ್ರಜಾಸಮರದ ಮೂಲಕ ಮಾತ್ರವೇ ಪಕ್ಷವು ರಾಜಕೀಯ ಅಧಿಕಾರ ವಶಪಡಿಸಿಕೊಳ್ಳುವ ಕರ್ತವ್ಯವನ್ನು ಈಡೇರಿಸುತ್ತದೆ. ಇದನ್ನು ಅದು ಸಾಮ್ರಾಜ್ಯವಾದ, ಊಳಿಗಮಾನ್ಯತೆ ಮತ್ತು ದೊಡ್ಡ ಬಂಡವಾಳಶಾಹಿಗಳನ್ನು ಪ್ರತಿನಿಧಿಸುವ ಪ್ರಸ್ತುತ ಪ್ರತಿಗಾಮಿ ಪ್ರಭುತ್ವಾಧಿಕಾರವನ್ನು ಕಿತ್ತೊಗೆದು ನವ ಪ್ರಜಾತಂತ್ರ ಪ್ರಭುತ್ವವನ್ನು ಸ್ಥಾಪಿಸುವ ಮೂಲಕ ನೆರವೇರಿಸುತ್ತದೆ. ಪ್ರಜಾಸೇನೆ ಸಮಾಜವಾದದ ಗುರಿಯೊಂದಿಗೆ ದೇಶವನ್ನು ರಕ್ಷಿಸುತ್ತದೆ, ನವ ಪ್ರಜಾತಂತ್ರ ಕ್ರಾಂತಿಯ ವಿಜಯವನ್ನು ಸಂರಕ್ಷಣೆ ಮಾಡುತ್ತದೆ. ಪಕ್ಷವು ಪ್ರಜಾಸೇನೆಗೆ ಮಾಲೆಮಾವಾದದ ಆಯುಧದೊಂದಿಗೆ ಶಿಕ್ಷಣ ನೀಡುತ್ತದೆ.

**ಕಲಂ 55 :** ಪಕ್ಷವು ಸೇನೆಯ ಮೇಲೆ ಬಹುಪ್ರಾರಂಭದಿಂದಲೂ ಪೂರ್ಣ ನಿಯಂತ್ರಣ ಇಟ್ಟುಕೊಂಡಿರುತ್ತದೆ. ಪಕ್ಷವು ಕ್ರಾಂತಿಯ ಸಮಗ್ರ ರಾಜಕೀಯ ವ್ಯೂಹತಂತ್ರ ಮತ್ತು ಕಾರ್ಯತಂತ್ರಗಳನ್ನು ನಿರ್ಧರಿಸುತ್ತಾದ್ದರಿಂದ, ಸುದೀರ್ಘ ಪ್ರಜಾಸಮರದ ಬೆಳವಣಿಗೆಯ ಮಟ್ಟವನ್ನು ದೃಷ್ಟಿಯಲ್ಲಿಟ್ಟುಕೊಂಡು, ಸೇನೆಯೊಳಗೆ ಪಕ್ಷ ಸಂಘಟನೆಯ ರೂಪಗಳು ಮತ್ತು ಕಾರ್ಯನಿರ್ವಹಣಾ ಕ್ರಮವನ್ನು ಸಹ ಪಕ್ಷವೇ ನಿರ್ಧರಿಸುತ್ತದೆ. ಕೇಂದ್ರ ಸಮಿತಿಯಿಂದ ರೂಪಿತವಾದ ಕೇಂದ್ರೀಯ ಮಿಲಿಟರಿ ಕಮಿಶನ್ನು ಪಕ್ಷದ ಮಿಲಿಟರಿ ಪಥ ಹಾಗೂ ಸಿಸಿಯ ನೀತಿಗಳು, ನಿರ್ದೇಶನಗಳು ಮತ್ತು ನಿರ್ಣಯಗಳಿಗೆ ಅನುಗುಣವಾಗಿ ಮಿಲಿಟರಿ ವ್ಯವಹಾರಗಳನ್ನು ನಡೆಸುತ್ತದೆ. ಈ ಬೆಳಕಿನಲ್ಲಿ, ಮಿಲಿಟರಿ ಕಾರ್ಯಾಚರಣೆಗಳನ್ನು ನಡೆಸುವುದಕ್ಕಾಗಿ ಮಿಲಿಟರಿ ಕಮಿಶನ್ನುಗಳು ಮತ್ತು ಕಮ್ಯಾಂಡುಗಳನ್ನು ವಿವಿಧ ಸ್ತರಗಳಲ್ಲಿ ರೂಪಿಸಲಾಗುವುದು. ಪಕ್ಷವು ಪ್ರಜಾಸೇನೆಯ ನಾಯಕ ಮತ್ತು ಸಂಘಟಕನಾಗಿರುವುದರಿಂದ, ವಿವಿಧ ಸ್ತರಗಳಲ್ಲಿನ ಪಕ್ಷ ಶ್ರೇಣಿಗಳು ಸೇನೆಯ ಎಲ್ಲಾ ವ್ಯವಹಾರಗಳಲ್ಲಿ ನಾಯಕತ್ವದ ಮತ್ತು ಮುಂಚೂಣಿಯ ಪಾತ್ರ ನಿರ್ವಹಿಸುತ್ತವೆ.

**ಕಲಂ 56 :** ಪ್ರಜಾಸೇನೆಯು ಮುಖ್ಯಬಲ, ಸೆಕೆಂಡರಿ ಬಲ ಮತ್ತು ಮೂಲಬಲ ಎಂಬ ಮೂರು ಬಲಗಳಿಂದ ರಚಿತವಾಗಿರುತ್ತದೆ.

**ಕಲಂ 57 :** ನಮ್ಮ ಗೆರಿಲ್ಲಾ ಸೇನೆಯಲ್ಲಿ ಪ್ಲಟೂನು, ಕಂಪೆನಿ ಮತ್ತು ಮೇಲ್ಪಟ್ಟ ಎಲ್ಲಾ ಫಾರ್ಮೇಶನ್ನುಗಳಲ್ಲಿ ಪಕ್ಷ ಸಮಿತಿಗಳು ಇರುತ್ತವೆ. ಪಕ್ಷಶಾಖೆ(branch)ಯನ್ನು ಪಕ್ಷ ಸದಸ್ಯರಿಂದ ರಚಿಸಲಾಗುತ್ತದೆ. ವಿವಿಧ ದಳಗಳೂ ಸಹ ಪಕ್ಷಕೋಶಗಳನ್ನೂ ಪಕ್ಷಶಾಖೆಗಳನ್ನೂ ಹೊಂದಿರುತ್ತವೆ. ಅಗತ್ಯವಿರುವೆಡೆ ಆ ಸ್ಥಾಯಿಯ ಪಕ್ಷಸಮಿತಿಯನ್ನು ರಚಿಸಲಾಗುತ್ತದೆ. ಪಕ್ಷಸದಸ್ಯರು ಮತ್ತು ಶ್ರೇಣಿಗಳು ಮಿಲಿಷಿಯಾದಲ್ಲೂ ಇರುತ್ತಾರೆ ಹಾಗೂ ನಾಯಕತ್ವದ ಮತ್ತು ಮುಂಚೂಣಿಯ ಪಾತ್ರ ನಿರ್ವಹಿಸುತ್ತಾರೆ.

**ಕಲಂ 58 :** ಮಿಲಿಟರಿ ಫಾರ್ಮೇಶನ್ನುಗಳ ಎಲ್ಲಾ ಸದಸ್ಯರು ಆಯಾ ಪಕ್ಷ ಸಮಿತಿಗಳ ನಾಯಕತ್ವದಡಿ ಕಾರ್ಯನಿರ್ವಹಿಸುತ್ತಾರೆ. ಈ ಪಕ್ಷ ಸಮಿತಿಗಳ ನಿರ್ಣಯಗಳನ್ನು ಆಯಾ ಮಿಲಿಟರಿ ಫಾರ್ಮೇಶನ್‌ಗಳು ಕೈಗೊಂಡು ಜಾರಿಗೊಳಿಸುತ್ತವೆ.

ಪಿಎಲ್‌ಜಿಎಯೊಳಗಿನ ಪಕ್ಷಸದಸ್ಯರನ್ನು ಅವರವರ ಸ್ಥಾಯಿಗೆ ಅನುಸಾರವಾಗಿ ಪಕ್ಷದ ಸಮ್ಮೇಳನ/ಪ್ಲೀನಂಗಳಿಗೆ ಆಹ್ವಾನಿಸಲಾಗುತ್ತದೆ. ಸಾಮಾನ್ಯವಾಗಿ, ಪ್ಲಟೂನ್ ಮತ್ತು ಅದಕ್ಕಿಂತ ಹೆಚ್ಚಿನ ಮಟ್ಟದ ಮಿಲಿಟರಿ ಫಾರ್ಮೇಶನ್ನುಗಳಲ್ಲಿನ ಪಕ್ಷ ಸಮಿತಿಗಳನ್ನು ಆಯಾ ಸ್ತರದ ಪಕ್ಷ ಸಮ್ಮೇಳನಗಳಲ್ಲೇ ಆಯ್ಕೆ ಮಾಡಲಾಗುತ್ತದೆ.

## ಅಧ್ಯಾಯ - 12

**ಕಲಂ 59 :** ಸಮೂಹ ಸಂಘಟನೆಗಳ ಕಾರ್ಯಕಾರಿ ಸಮಿತಿಗಳಲ್ಲಿ ಪಕ್ಷದ ಫ್ರಾಕ್ಷನ್‌ಗಳನ್ನು ರಚಿಸಲಾಗುತ್ತದೆ. ಈ ಫ್ರಾಕ್ಷನ್ನುಗಳು ಸರಿಯಾದ ಕಾನ್‌ಕ್ರೀಟ್ ಪರಿಸ್ಥಿತಿಗೆ ಅನುಗುಣವಾದ ಸೂಕ್ತ ವಿಧಾನಗಳನ್ನು ಅನುಸರಿಸಿ ಸಮೂಹ ಸಂಘಟನೆಗಳ ಕಾರ್ಯಕಾರಿ ಸಮಿತಿಗಳಿಗೆ ಮಾರ್ಗದರ್ಶನ ಮಾಡುತ್ತವೆ. ಫ್ರಾಕ್ಷನ್ ಕಮಿಟಿಗಳು ರಹಸ್ಯವಾಗಿ ಕಾರ್ಯನಿರ್ವಹಿಸುತ್ತವೆ. ಫ್ರಾಕ್ಷನ್‌ಗೆ ಮಾರ್ಗದರ್ಶನ ಮಾಡುತ್ತಿರುವ ಸಮಿತಿಯ/ಸದಸ್ಯರ ಅಭಿಪ್ರಾಯವನ್ನು ಅಂತಿಮ ಅಭಿಪ್ರಾಯವೆಂದು ಪರಿಗಣಿಸಬೇಕು. ಫ್ರಾಕ್ಷನ್ ಸದಸ್ಯರಿಗೆ ಏನಾದರೂ ಭಿನ್ನಾಭಿಪ್ರಾಯಗಳಿದ್ದಲ್ಲಿ ಅವುಗಳನ್ನು ಅವರು ಸಂಬಂಧಿತ ಪಕ್ಷ ಸಮಿತಿಗೆ/ಮೇಲ್ಸಮಿತಿಗೆ ಬರವಣಿಗೆಯಲ್ಲಿ ಕಳಿಸಬೇಕು. ಸಂಬಂಧಿತ ಪಕ್ಷ ಸಮಿತಿಗಳು ತಮ್ಮದೇ ಸ್ತರದಲ್ಲಿನ ಸಮೂಹ ಸಂಘಟನೆಗಳ ಫ್ರಾಕ್ಷನ್ ಕಮಿಟಿಗಳಿಗೆ ಮಾರ್ಗದರ್ಶನ ಮಾಡಬೇಕು.

## ಅಧ್ಯಾಯ - 13 : ಪಕ್ಷದ ನಿಧಿ

**ಕಲಂ 60 :** ಸದಸ್ಯತ್ವ ಶುಲ್ಕ, ವಂತಿಗೆಗಳು, ದೇಣಿಗೆಗಳು, ತೆರಿಗೆಗಳು *ದಂಡಗಳು ಮತ್ತು ಶತೃವಿನಿಂದ ವಶಪಡಿಸಿಕೊಳ್ಳಲಾದ ಸಂಪತ್ತಿನ ಮೂಲಕ* ಪಕ್ಷದ ನಿಧಿಯನ್ನು ಸಂಗ್ರಹಿಸಬೇಕು.

**ಕಲಂ 61 :** ಪಕ್ಷ ಸದಸ್ಯರು ನೀಡಬೇಕಾದ ವಂತಿಗೆಯನ್ನು ಆಯಾ ರಾಜ್ಯ ಸಮಿತಿಗಳು ನಿರ್ಧರಿಸಿ ಸಂಗ್ರಹಿಸಬೇಕು.